# ಕೊಡಗು ಸಂಗಾತಿ

ಮಾರ್ಚ್1 ರಿಂದ 15, 2001 ಪಾಕ್ಷಿಕ ಪತ್ರಿಕೆ (ಮಾಯಿ 17-30, ಸುಗ್ಗಿ-1)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 5 ಪುಟಗಳು : 24 ಬೆಲೆ ರೂ. : 6-00



ಲೇಖನ : ಒಳಪುಟಗಳಲ್ಲಿ

## 1785 ರಲ್ಲಿ " ಟಿಪ್ಪು ಸುಲ್ತಾನ್ " ನಿಂದ ಭಗ್ನಗೊಂಡವು ಎನ್ನಲಾದ ಹೆರವನಾಡಿನ ಕ್ಷೇತ್ರ ಪಾಲ "ಮಾದೂರಪ್ಪ" ಐತಿಹಾಸಿಕ ದೇವಸ್ಥಾನ ಪತ್ತೆ.

1 ಏಕ್ರೆ ವ್ಯಾಪ್ತಿಯಲ್ಲಿರುವ ಈ ದೇವಸ್ಥಾನಕ್ಕೆ ಸ್ಥಳೀಯ ನಾಯಕ ಅರಂಬೂರು ವಸಂತ ಕುಮಾರ್‌ನವರಿಂದ ಜೀರ್ಣೋದ್ಧಾರದ ಸಂಕಲ್ಪ.

ಚಿತ್ರ : ಬೈತಡ್ಕ ದಿನೇಶ್ ಬೆಳ್ಯಪ್ಪ.

## ಜೀವಾವಧಿ ಸದಸ್ಯತನ ಕೊಟ್ಟೊಳೊ.



ಸುಂಟಿಕೊಪ್ಪ "ಪನ್ಯ" ಗ್ರಾಮದ ಶ್ರೀ ಮಂಜ್ಞಪುರ ಗಣಪತಿ ಮತ್ತು ದೇವಕ್ಕಿ, ಮಕ್ಕಳಾದ ಅರ್ಚನ, ಹೇಮಂತ್ ಇವು ಪತ್ರಿಕೆಯ ಅಭಿವೃದ್ಧಿ ಬಯಸಿ ಜೀವಾವಧಿ ಸದಸ್ಯತನ ಕೊಟ್ಟೊಳೊ. ಇವು ಮೂಲತಃ ನರಿಯಂದಜಡ ಗ್ರಾಮದ ಮಂಜ್ಞಾಪುರ ತಿಮ್ಮಯ್ಯ (ಮಾಜಿ ಸೈನಿಕ) ಇವರ ಮಂಜ್ಞ ಆಗಿಯೊಳೊ. ಗಣಪತಿಯವು ಪನ್ಯ ತೋಟಲಿ 23 ವರ್ಷಗಳಿಂದ Asst. ಮ್ಯಾನೇಜರ್ ಹುದ್ದೆಲಿ ಇದ್ದ್‌ಕಂಡ್, ಸಮಾಜ ಸೇವೆ ಮಾಡಿಕಂಡ್ ಜನಾನುರಾಗಿ ಒಳೊ.

ಈ ಸಂಸಾರಕ್ಕೆ ಶ್ರೀ ಕುಲದೇವು ಶ್ರೀ ವೆಂಕಟರಮಣ ಮತ್ತೆ ಶೃಂಗೇರಿ ಶಾರದೆಯರ ಅನುಗ್ರಹ ಸದಾ ಇರಲಿತ್ತೇಳಿ ಸಂಗಾತಿ ಈ ಸಂದರ್ಭಲಿ ಶುಭ ಹಾರೈಸಿದೆ.

— ಸಂಪಾದಕಿ.

## ತಿಥಿಕರ್ಮಾಂತರ ಆಹ್ವಾನ ಪತ್ರಿಕೆ



ಬಸಪ್ಪ
ಜನನ : 19-4-1949
ಮರಣ : 25-2-2001

ಕೊರಂಬಡ್ಕ ಶ್ರೀ ರಾಮಪ್ಪನವರು ಮಾಡುವ ವಿಜ್ಞಾಪನೆ, ಲಿಂಗಾಪುರ ಗ್ರಾಮ ಸನ್ 2001ನೇ ಇಸವಿ ಫೆಬ್ರವರಿ 26ನೇ ಸೋಮವಾರ ದಿನ ಶಿವಾಧೀನ ಹೊಂದಿದ ನನ್ನ ಮಗ ಬಸಪ್ಪನವರ ತಿಥಿಕರ್ಮಾಂತರವನ್ನು ತಾ. 13-3-2001ನೇ ಮಂಗಳವಾರ ದಿನ ಹಗಲು 12 ಗಂಟೆಗೆ ಕೊಡಗು ಗೌಡ ಸಮಾಜ, ಗೋಣಿಕೊಪ್ಪ ರಸ್ತೆ, ಪಿರಿಯಾಪಟ್ಟಣದಲ್ಲಿ ನಡೆಸಲು ಗುರುಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ

ತಮ್ಮ ಆಗಮನಾಭಿಲಾಷಿಗಳು
**ಶ್ರೀ ಕೆ. ರಾಮಪ್ಪ ಮತ್ತು ಕುಟುಂಬಸ್ಥರು ಪತ್ನಿ : ಶಾರದ, ಮಗಳು : ಪವಿತ್ರ, ಮಗ : ತೇಜಸ್ಸ್,**
**ವಿಳಾಸ : 122/A, 1ನೇ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು - 20 ✆ : 95821 - 518167**

## ಕೊಡಗು ಸಂಗಾತಿಯ ಸಂಚಾಲಕ, ಏಜೆಂಟ್, ವರದಿ, ಕಲೆಕ್ಷನ್, ಜಾಹಿರಾತುಗಳಿಗಾಗಿ ಬೈಚನ ನಂದಕುಮಾರ್ ಆಯ್ಕೆ.



**Ph : 35920**

ಕೊಡಗು ಸಂಗಾತಿಯ ಪಾಕ್ಷಿಕ ಪತ್ರಿಕೆಯ ಸಂಚಾಲಕರಾಗಿ, ಏಜೆಂಟ್‌ರಾಗಿ ಬೈಚನ ನಂದಕುಮಾರ್ ನವರನ್ನು ಅವರ ವಿನಂತಿ ಮೇರೆ ಆಯ್ಕೆ ಮಾಡಲಾಗಿದೆ. ಇವರು ಕಾರುಗುಂದ, ಕಡಿಯತ್ತೂರು, ಐವತ್ತೋಕ್ಲು ಗ್ರಾಮಗಳಿಗೆ ಸೀಮಿತವಾಗಿ, ವರದಿ, ಕಲೆಕ್ಷನ್, ಜಾಹೀರಾತು ಇತ್ಯಾದಿ ಯಾಗಿ ಕೆಲಸ ನಿರ್ವಹಿಸಲು ಅನುವು ನೀಡಲಾಗಿದೆ. ಸಹೃದಯ ಓದುಗರು ಸಹಕರಿಸುವಂತೆ ಕೋರಿಕೆ.

— ಸಂಪಾದಕಿ.

## ಕೊಡಗು ಸಂಗಾತಿಯ ಸಂಚಾಲಕ, ಏಜೆಂಟ್, ವರದಿ, ಕಲೆಕ್ಷನ್ ಜಾಹಿರಾತುಗಳಿಗಾಗಿ ಕುಯ್ಯಮುಡಿ ಸುನಿಲ್ ಆಯ್ಕೆ.



**Ph : 30633**

ಕೊಡಗು ಸಂಗಾತಿ ಪತ್ರಿಕೆಯ ಸಂಚಾಲಕರಾಗಿ, ಏಜೆಂಟ್‌ರಾಗಿ ಕುಯ್ಯಮುಡಿ ಸುನಿಲ್‌ನವರನ್ನು ಅವರ ವಿನಂತಿ ಮೇರೆ ಆಯ್ಕೆ ಮಾಡಲಾಗಿದೆ. ಇವರು ಸಣ್ಣಪುಲಿಕೋಟು, ದೊಡ್ಡಪುಲಿಕೋಟು, ಅಯ್ಯಂಗೇರಿ, ಕೋರಂಗಾಲ, ಬಲ್ಲಮಾವಟಿ,ಚೆಟ್ಟಿಮಾನಿ, ಸಿಂಗತ್ತೂರು, ಕುಂದಚೇರಿ, ಚರಂಡೇಟಿ. ಭಾಗಮಂಡಲ ಗ್ರಾಮಗಳಿಗೆ ಸೀಮಿತವಾಗಿ ವರದಿ, ಕಲೆಕ್ಷನ್, ಜಾಹಿರಾತು ಇತ್ಯಾದಿಯಾಗಿ ಕೆಲಸ ನಿರ್ವಹಿಸಲು ಅನುವು ನೀಡಲಾಗಿದೆ. ಸಹೃದಯ ಓದುಗರು ಸಹಕರಿಸುವಂತೆ ಕೋರಿಕೆ.

— ಸಂಪಾದಕಿ.

## ಚಿರಸ್ಮರಣೆ

ದಿ|| ಕೈಬಿಲಿರ ಬೋಜಮ್ಮ ತಿಮ್ಮಯ್ಯ
ಮರಣ 17-1-2000

ನೀನು ದಿನಾಂಕ 17-01-2000ದಂದು ಕಣ್ಮರೆಯಾದರು, ಸದಾ ನನ್ನ ಮತ್ತು ಮಕ್ಕಳ ನೆನಪಿನಲ್ಲಿದ್ದು ಸಕಲ ಕಾರ್ಯಗಳಿಗೂ ಆಶೀರ್ವಾದಿಸುತ್ತಿರುವ ನಿನ್ನ ನೆನಪಿನಲ್ಲಿರುವ

ಪತಿ : ತಿಮ್ಮಯ್ಯ ಮಗ : ದಿನೇಶ್, ಸೊಸೆ : ಕವಿತ, ಮಗ : ಮನೋಹರ್, ಗುಡ್ಡೆ ಹೊಸೂರು ಮಗ : ವಂಸತ, ಸೊಸೆ : ಕಲ್ಪನ ಮತ್ತು ಮೊಮ್ಮಗ : ಲಿಖಿತ್ ಬೋಪಣ್ಣ. **Ph : 958376 / 72784**

# 2001, ಮಾರ್ಚಿ 1 ರಿಂದ 15 ರ ತನಕ

## ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಗುಜರಾತ್‌ನಲ್ಲಿ ಭೂಕಂಪ | - ಸಂಪಾದಕೀಯ | 02 |
| ವಿಶ್ವದ ಸಾಲಗಾರ ರಾಷ್ಟ್ರಗಳಲ್ಲಿ ಭಾರತಕ್ಕೆ 9ನೇ ಸ್ಥಾನ | - ಸಂಗಾತಿ | 02 |
| ದಿನಾಂಕ 18-2-2001ರಲ್ಲಿ ಕುಶಾಲನಗರದಲ್ಲಿ ಗೌಡ ಜನಾಂಗದ ಸಂತೋಷ ಕೂಟ | - ಆಜಡ್ಕ ರಾಣಿ ಬಾಲಕೃಷ್ಣ | 03 |
| ನ್ಯೂಸ್ ಪ್ರಿಂಟ್ ಸಬ್ಸಿಡಿ | - ಸಂಗಾತಿ | 04 |
| ಸುಂಟಿಕೊಪ್ಪದಲ್ಲಿ ಹಿಂದೂ ರುದ್ರಭೂಮಿಯ ರೂವಾರಿ : ಶ್ರೀ ಗುಡ್ಡೆಮನೆ ಎ ದೇವಯ್ಯ (ಬಾಬು) | - ಸಂಗಾತಿ | 05 |
| ರಾಷ್ಟ್ರೀಕೃತ ಬ್ಯಾಂಕ್ ಶಾಖೆ ಮುಚ್ಚಲು ಅವಕಾಶವಿಲ್ಲ : ಯಶವಂತ ಸಿನ್ಹಾ | - ಸಂಗಾತಿ | 05 |
| ಮರಗೋಡು ಗೌಡ ಸಮಾಜದ ಆಶ್ರಯದಲ್ಲಿ ೪ನೇ ವರ್ಷದ ನಾಡಹಬ್ಬ ಕೈಲು ಮುಹೂರ್ತ ಪ್ರಯುಕ್ತ ನಡೆದ ಸಂತೋಷಕೂಟ : ವರದಿ | - ಜೈನೀರ ವೆಂಕಟೇಶ್ | 06 |
| ಹುಲಿ ಮೀಸೆ | - ಬಿ. ಆರ್. ಜೋಯಪ್ಪ | 07 |
| ಜನಾನುರಾಗಿ ಕೊಳ್ಳದ ಸೋಮಯ್ಯ ಇನ್ನಿಲ್ಲ | - ಪಟ್ಟಡ ಶಿವಕುಮಾರ್ | 09 |
| ಹೆರವನಾಡಿನಲ್ಲಿ ಕಾಡುಪಾಲಾಗಿದ್ದ ಐತಿಹಾಸಿಕ ಮಾದೂರಪ್ಪ ದೇವಾಲಯ ಪತ್ತೆ | - ಸಂಗಾತಿ | 10 |
| ಮನು ಸ್ಮೃತಿಯ ಪ್ರಕಾರ ವರ್ಣ ಸಂಕರಗಳು ಮತ್ತು ಅವರ ವೃತ್ತಿಗಳು : ಭಾಗ - 2 | - ಬಿಟ್ಟೀರ ಚೋಂದಮ್ಮ ಶಂಭು | 12 |
| ಪ್ರಜಾವೇದಿಕೆ ಬರೆದ ಪತ್ರ | - ಎನ್. ಎಸ್. ದೇವಿಪ್ರಸಾದ್ | 18 |
| ನಗೆಹನಿಗಳು | - ಕುಟ್ಟನ ದೀಪಕ್ ಸೋಮಯ್ಯ | |
| **ಅರೆಭಾಷಿಕ ವಿಭಾಗ** | | |
| ನಮ್ಮ ಸಂಸ್ಕೃತಿ : ಸನಾತನ ಧರ್ಮದ ವಿಶಿಷ್ಟತೆ ಮತ್ತು ಕೃತಜ್ಞತೆ | - ಬೈತಡ್ಕ ದೇವಮ್ಮ ಮೊಣಪ್ಪ | 13 |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 28 | - ಶಂಕರನ ಬಸಪ್ಪ | 15 |
| 5 - ನಿನ್ನ ಕೈಲೆ ಉಟ್ಟು | - ಪಟ್ಟಡ ಪ್ರಭಾಕರ | 19 |
| "ಸ್ತೋತ್ರ" | - ಮುಕ್ಕಾಟಿರ ವಾಣಿ ಈರಪ್ಪ | 19 |
| ಸಂಗಾತಿ ಪದಬಂಧ — ೨. 'ಸಿಂಚನ' | - ಅಚ್ಚಲ್ಪಾಡಿ ಕವಿತ ಬೋಜಪ್ಪ | 20 |



| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ**, 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **95821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಕುಂಭಗೌಡನ ಪ್ರವೀಣ್‌ಕುಮಾರ್, ವೆಜಿಟೆಬಲ್ ಶಾಪ್, ಪಾಂಡನ ಕಾಂಪೌಂಡ್, ಅಪ್ಪಯ್ಯಗೌಡ ರಸ್ತೆ, ಮಡಿಕೇರಿ, |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19, ಫೋನ್ : 080/6500946 |

**ಚಂದಾ ವಿವರ :** ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಗುಜರಾತ್‌ನಲ್ಲಿ ಭೂಕಂಪ

ಗುಜರಾತಿನಲ್ಲಿ ಸಂಭವಿಸಿದ ಭೂಕಂಪವು 21ನೇ ಶತಮಾನದಲ್ಲಿ ಕೇಳರಿಯದ ಒಂದು ದುರದೃಷ್ಟಕರವಾದ ಘಟನೆ. ಇದರಲ್ಲಿ ನೊಂದವರಿಗೆ ಸಹಾಯ ಮಾಡುವುದು ಮಾನವನ ಕರ್ತವ್ಯವಾಗಿದೆ. ಈ ಹಿಂದೆ ಅಲ್ಲಲ್ಲಿ ಭೂಕಂಪನವಾಗುತ್ತಿದ್ದರೂ ಈ ರೀತಿಯ ಭಯಂಕರವಾದ ಘಟನೆ ನಡೆದಿರಲಿಲ್ಲ. ಭೂಗರ್ಭ ಶಾಸ್ತ್ರದ ವಿಜ್ಞಾನಿಗಳ ಪರಿಶೋಧನೆಗೂ ಎಟುಕದ ಪರಿಸ್ಥಿತಿಯಾಯಿತು. ಭೂಗರ್ಭಶಾಸ್ತ್ರಜ್ಞರು ಯಾವ ಸಮಯದಲ್ಲಿ ಎಲ್ಲಿ ಎಷ್ಟರ ತೀವ್ರತೆಯ ಭೂಕಂಪವಾಗುತ್ತದೆ ಎಂಬುದನ್ನು ವಿಜ್ಞಾನಿಗಳು ಕರಾರುವತ್ತಾಗಿ ಹೇಳುವಂತಾಗಬೇಕು. ಚಂದ್ರಲೋಕದತ್ತ ಮನುಷ್ಯನು ಹೋಗಿ ಬರುವ ಹಾಗೂ ಬೇರೆ ಬೇರೆ ಗ್ರಹಗಳಿಗೆ ಹೋಗಿ ಬರುವ ಪ್ರಯತ್ನಕ್ಕಿಂತ ಭೂಮಿಯ ಮೇಲೆ ಕಟ್ಟಿದ ಭವ್ಯ ಕಟ್ಟಡಗಳು ಹಾಗೂ ಜನರನ್ನು ಕಾಪಾಡುವ ವೈಜ್ಞಾನಿಕವಾದ ಸಂಶೋಧನೆಯಾಗಬೇಕಾಗಿದೆ. ಜ್ವಾಲಾಮುಖಿಗಳ ದೇಶವೆಂದೇ ಪ್ರಸಿದ್ಧವಾಗಿರುವ ಜಪಾನಿನ ತಂತ್ರಜ್ಞಾನದೊಡನೆ ಭಾರತೀಯರಲ್ಲಿಲ್ಲದೆ ಹೊರದೇಶಗಳ ಗಣ್ಯವಿಜ್ಞಾನಿಗಳ ಸಂಶೋಧಕರ ಸಹಾಯದಿಂದ ಇಡೀ ಭೂಮಂಡಲದಲ್ಲಿಯೆ ಪರಿಶೋಧನೆ ನಡೆಸಿ ಭೂಕಂಪವಾಗುವುದನ್ನು ತಡೆಗಟ್ಟಲು ಸಾಧ್ಯವಾಗದಿದ್ದರು ಭೂಕಂಪವಾಗುವ ನಿಖರವಾದ ಸಮಯವನ್ನಾದರೂ ಗೊತ್ತುಮಾಡಿ ಜನರುಗಳಿಸಿದ ಸಂಪತ್ತು ಜನಸಂಪತ್ತು ಉಳಿಸುವ ಯೋಜನೆಯನ್ನಾದರೂ ಹಾಕಿಕೊಳ್ಳಬಹುದೆಂದು ಸಂಗಾತಿಯ ಸಲಹೆ.

---

# ವಿಶ್ವದ ಸಾಲಗಾರ ರಾಷ್ಟ್ರಗಳಲ್ಲಿ ಭಾರತಕ್ಕೆ 9ನೇ ಸ್ಥಾನ

ವಿಶ್ವದ ಹತ್ತು ಅತಿ ದೊಡ್ಡ ಸಾಲಗಾರ ದೇಶಗಳಲ್ಲಿ ಭಾರತ ಒಂದಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಹಳೆ ಸಾಲದ ಪ್ರಮಾಣ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ (ಜಿಡಿಪಿ) ಶೇಕಡಾ 21.9ರಿಂದ 20.7ಕ್ಕೆ ಕಡಿಮೆಯಾಗಿದೆ ಎಂದು ಸರಕಾರ ಬಿಡುಗಡೆ ಮಾಡಿದ ಆರ್ಥಿಕ ಸಮೀಕ್ಷೆ ತಿಳಿಸಿದೆ.

ಅಲ್ಪಾವಧಿ ಮತ್ತು ದೀರ್ಘಾವಾಧಿ ಎರಡೂ ಸೇರಿ ಒಟ್ಟು ಸಾಲ 2000-01ನೇ ಸಾಲಿನಲ್ಲಿ 97.86ಶತಕೋಟಿ ಡಾಲರ್‌ಗಳಷ್ಟಿತ್ತು. ಅದಕ್ಕಿಂತ ಹಿಂದಿನ ವರ್ಷ(1999-2000)98.44ಶತಕೋಟಿ ಡಾಲರ್‌ಗಳಷ್ಟು ಸಾಲ ಪಡೆಯಲಾಗಿತ್ತು.

ಅಂತರಾಷ್ಟ್ರೀಯ ಮಟ್ಟದಲ್ಲಿ ಹೋಲಿಸಿ ನೋಡಿದಾಗ ವಿಶ್ವಬ್ಯಾಂಕಿನಿಂದ ಸಾಲ ಪಡೆದ 15ದೊಡ್ಡಸಾಲಗಾರ ದೇಶಗಳ ಪೈಕಿ ಭಾರತ 9ನೇ ಸ್ಥಾನದಲ್ಲಿದೆ. 1998ರ ಡಿಸೆಂಬರ್ ನಿಂದಲೂ ಭಾರತ ಇದೇ ಸ್ಥಾನದಲ್ಲಿದೆ.

ಅತ್ಯಧಿಕ ರಫ್ತು ಬೆಳವಣಿಗೆ ಸಾಧಿಸುವ ಗುರಿ ಹೊಂದಿದ ಈಗಿನ ಆರ್ಥಿಕ ನೀತಿ ಅಲ್ಪಾವಧಿ ಸಾಲವನ್ನು ನಿರ್ಬಂಧಿಸಿ ಸಾಲಕ್ಕೆ ಹೊರತಾದ ಆರ್ಥಿಕ ಹರಿವನ್ನು ಸೃಷ್ಟಿಸಿದೆ. ಇದರಿಂದಾಗಿ ಸದ್ಯದಲ್ಲೇ ಭಾರತದ ಸಾಲದ ಪ್ರಮಾಣ ಕಡಿಮೆಯಾಗಲಿದೆ ಎಂದು ಸಮೀಕ್ಷೆ ಹೇಳಿದೆ.

ಪ್ರಚಲಿತ ವರ್ಷ ದೀರ್ಘಾವಧಿ ಸಾಲ 93.36 ಶತಕೋಟಿ ಡಾಲರ್‌ಗೆ ಕುಸಿದಿದೆ. ಕಳೆದ ವರ್ಷ ಇದು 94.40ಶತಕೋಟಿ ಡಾಲರ್‌ಗಳಷ್ಟಿತ್ತು. ಇದೇ ವೇಳೆ ಅಲ್ಪಾವಧಿ ಸಾಲ 4.04 ಶತಕೋಟಿ ಡಾಲರ್‌ಗಳಿಂದ 4.50ಶತಕೋಟಿ ಡಾಲರ್‌ಗಳಿಗೆ ಹೆಚ್ಚಿದೆ.

ಏಷಿಯನ್ ಕರೆನ್ಸಿ ಮತ್ತು ತೈಲಬೆಲೆ ಏರಿಕೆಯಂತಹ ಅಂತರಾಷ್ಟ್ರೀಯ ಆಘಾತಗಳ ಹೊರತಾಗಿಯೂ 1998-99ರಲ್ಲಿ ರಿಸರ್ಜೆಂಟ್ ಇಂಡಿಯಾ ಬಾಂಡ್ (ಆರ್‌ಐಬಿ) ಮತ್ತು ಈ ವರ್ಷ ಇಂಡಿಯಾ ಮಿಲೆನಿಯಂ ಬಾಂಡ್‌ಗಳ (ಐಎಂಡಿ) ಮೂಲಕ ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ವಿದೇಶಿ ಸಾಲಪಡೆದು ತನ್ನ ಆರ್ಥಿಕ ತಳಹದಿ ಬಲಾಢ್ಯವಾಗಿದೆ ಎಂದು ಸಾಬೀತುಪಡಿಸಿದೆ.

"ದೇಶದ ವಿದೇಶಿ ಸಾಲ ಮತ್ತು ಸಾಲ ಬಾಧ್ಯತೆಗಳ ಪಾವತಿ ಸೇವೆಗಳ ಮೇಲೆ ಇದು ಮಧ್ಯಮಾವಧಿ ಪರಿಣಾಮ ಬೀರಲಿದೆ. ಈ ಯೋಜನೆಗಳ ಮೂಲಕ ಸಾಲ ಸಂಗ್ರಹಣೆ ಮೊತ್ತ ಗಣನೀಯವಾಗಿ ಏರುತ್ತಿರುವುದು ಭಾರತೀಯ ಆರ್ಥಿಕತೆಯ ದೃಢತೆ ಮೇಲೆ ಅನಿವಾಸಿ ಭಾರತೀಯರಿಗೆ ಇರುವ ಸಂಪೂರ್ಣ ವಿಶ್ವಾಸದ ಪ್ರತೀಕ" ಎಂದು ಸಮೀಕ್ಷೆ ತಿಳಿಸಿದೆ.

— ಸಂಗಾತಿ.

---

### ನಗೆಹನಿ – ಗಿಫ್ಟ್

ಅಂವನ ಹತ್ರ ಇದ್ದ ಕೊಡೆ ನೋಡಿ ಇಂವ ಕೇಳ್ತ್.
"ಏನ್‌ರ ಹೊಸ ಕೊಡೆ ಯಾಗ ತಕಂಡ"!.
ಅಂವ : " ಇದ್ ನಂದ್ ಅಲ್ಲರ, ಅಣ್ಣಂದ್, "ಗಿಫ್ಟ್"
ಇಂವ : "ಮತ್ತೆ ನಿಂಗೆ ಅಣ್ಣ ಇಲ್ಲೆ ತಾ ಹೇಳಿದ್ದ."
ಅಂವ :"ನಂಗೆ ಅಣ್ಣ ಇಲ್ಲೆರ, ಈ ಕೊಡೆದ್ ವಾರಸುದಾರಂಗೆ ಉಟ್ಟು ಕಂಡದೆ, ಇಲ್ಲಿ ನೋಡು ಹಿಡಿಲಿ ಬರ್ಕಂಡಿರುದು, "With Affection, your brother's".

---

ತಪ್ಪುಗಳನ್ನು ಮಾಡದವನು ಸಾಮಾನ್ಯವಾಗಿ ಏನನ್ನೂ ಮಾಡಲಾರ.

# ದಿನಾಂಕ 18-2-2001ರಲ್ಲಿ ಕುಶಾಲನಗರದಲ್ಲಿ ಗೌಡ ಜನಾಂಗದ ಸಂತೋಷ ಕೂಟ

ಗೌಡ ಜನಾಂಗ ಅಂದರೆ ಅರೆಭಾಷಿಕರು ಮತ್ತು ಒಕ್ಕಲಿಗರು, ಎಂಬ ಭೇಧವಿಲ್ಲದ ಸಂಮಿಲನದ ಒಂದು ಕೂಟವೆಂದು ಹೇಳಬಹುದು.

ಅಕ್ಕ ತಂಗಿಯರಂತೆ, ಅಣ್ಣತಮ್ಮಂದಿರಂತೆ, ಸಹಕರಿಸಿ ಮುಂದಿನ ಪೀಳಿಗೆಗೆ ಒಂದೇ ಕುಲಕ್ಕೆ ದಾರಿ ದೀಪವಾಗಲು ಕೆಲವೊಮ್ಮೆ ಪ್ರಯತ್ನವನ್ನು ಮತ್ತು ಲೋಪ ದೋಷಗಳನ್ನು ತಿದ್ದಿ ನಾವು ಸಹಬಾಳ್ವೆ ಮಾಡಬೇಕಾಗುತ್ತದೆ. ಇಂತಹ ಅವಕಾಶಕ್ಕೆ ಕೆಲವರು ಹಾತೊರೆಯುವುದುಂಟು. ಸ್ನೇಹಕ್ಕಾಗಿ, ಪರಿಚಯಕ್ಕಾಗಿ, ಸಂಭಂದಕ್ಕಾಗಿ, ಹೀಗೆ ಹಲವಾರು ರೀತಿಯಲ್ಲಿ ಇಂತಹವುಗಳನ್ನು ನಾವು ಅರಿತುಕೊಳ್ಳುವ ಸಂದರ್ಭವೇ ಸಂತೋಷಕೂಟ. ವರ್ಷವಿಡಿ ದುಡಿಯುವ ಜನರಿಗೆ ಕೆಲವೊಮ್ಮೆ ಹೊರಗಿನ ಆಚಾರ, ವಿಚಾರಗಳು ಮುಖ್ಯ ಹಾಗೂ ಕಾಲಕ್ಕೆ ತಕ್ಕಂತೆ ಇರುವ ಬದಲಾವಣೆಗಳು ಸಂಘ, ಸಂಘಟನೆಗಳನ್ನು ರೂಪಿಸಿ ಇಂತಹವುಗಳನ್ನು ಜನರು ಪಡೆದುಕೊಂಡರೆ ಮುಂದಿನ ಅಭಿವೃದ್ಧಿಗೆ ಸಹಕಾರವಾಗಬಹುದು. ಜನರಿಗೆ ತಿಳಿಸಿ ಹೇಳುವ ಮತ್ತು ಗೌಡ ಜನಾಂಗದ ಮಿಲನ ಇವು ಎರಡು ಸೇರುವುದೇ ಸಂತೋಷಕೂಟ. ಇಂತಹ ಸಂದರ್ಭವು ಕುಶಾಲನಗರ ಹೋಬಳಿಯ ಗೌಡ ಸಮಾಜದಲ್ಲಿ ತಾರೀಖು 18-2-2001ರಂದು ಬಹಳ ವಿಜೃಂಭಣೆಯಿಂದ ನಡೆಸಲಾಯಿತು.

ಕ್ರೀಡಾಕೂಟದ ಉಪಾಧ್ಯಕ್ಷರಾದ ಪೋರೆಯನ ರಮೇಶನವರ ಕ್ರೀಡಾಕೂಟದ ಉದ್ಘಾಟನೆಗಳೊಂದಿಗೆ ತಾ.17-2-2001ರ ಅಪರಾಹ್ನ 2ಗಂಟೆಯಿಂದ ಚಿಕ್ಕ ಮಕ್ಕಳಿಗೆ ಕಾಳು ಹೆಕ್ಕುವುದು, ಓಟ, ಕಪ್ಪೆಕುಪ್ಪಳಿಸುವುದು. ಬಾಲಕರಿಗೆ , ಬಾಲಕಿಯರಿಗೆ ಭಾರದ ಗುಂಡು ಎಸೆತ, ಮತ್ತು ಚಮಚ ನಿಂಬೆ ಹಣ್ಣಿನ ಓಟ, ಪುರುಷರಿಗೆ ಭಾರದ ಗುಂಡು ಎಸೆತ, ಮಹಿಳೆಯರಿಗೆ ಸಂಗೀತ ಕುರ್ಚಿ, ವಿಷದ ಚಂಡಾಟ ಇವುಗಳ ಸ್ಪರ್ಧೆಯನ್ನು ಪೋಲಿಸ್ ಮೈದಾನದಲ್ಲಿ ಏರ್ಪಡಿಸಲಾಗಿತ್ತು. ಸೂದನ ಗೋಪಾಲ ಮತ್ತು ಪೋರೆಯನ ರಮೇಶನವರು ನಡೆಸಿಕೊಟ್ಟರು. ಬ್ಲಾಕ್ ವಿಂಗಡಣೆಯಂತೆ ತಾರೀಖ್ 18ರ ಅಪರಾಹ್ನ ಆವರಣದಲ್ಲಿ ಹಗ್ಗ ಜಗ್ಗಾಟ ನಡೆಸಲಾಯ್ತು. ತಾರೀಖು 17ರ. ಸಂಜೆ 6ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಸ್ಪರ್ಧೆಯು ಗೌಡ ಸಮಾಜದ ಆವರಣದಲ್ಲಿ ನಡೆಸಲಾಯ್ತು. ಮೊದಲಿಗೆ ಹಾಡುಗಾರಿಗೆ, ಫ್ಯಾನ್ಸಿಡ್ರೆಸ್, ಭಾವಗೀತೆ, ದೇಶಭಕ್ತಿಗೀತೆಗಳು, ಜನಪದ ಗೀತೆಗಳು ಇವುಗಳೊಂದಿಗೆ ಆ ದಿನದ ಕಾರ್ಯಕ್ರಮ ಮುಕ್ತಾಯ ವಾಯ್ತು. ಉಳಿದ ಕೆಲವು ಕಾರ್ಯಕ್ರಮವನ್ನು ತಾ.18ರ ಬೆಳಿಗ್ಗೆ 9ಗಂಟೆಯಿಂದ ಪುಟಾಣಿ ಮಕ್ಕಳ ಸಾಂಸ್ಕೃತಿಕ ಕಲೆಗಳು, ನಾನಾ ರೀತಿಯ ನೃತ್ಯ, ಭರತನಾಟ್ಯ ಮತ್ತು ಏಕಪಾತ್ರಾಭಿನಯವನ್ನು (ಹರಿಶ್ಚಂದ್ರ ಮತ್ತು ಚಂದ್ರಮತಿ) ಪಾತ್ರವನ್ನು ಮುಕ್ಕಾಟಿ ವೀಣಾ ಕುಶಾಲಪ್ಪ, ಅಭಿನಯಿಸಿ ಜನರ ಮೆಚ್ಚುಗೆಗೆ ಪಾತ್ರರಾದರು, ಹಾಗೂ ಹಿರಿಯ ಕಲಾವಿದೆ ಆರೋಗ್ಯ ಇಲಾಖೆಯ ಉದ್ಯೋಗಿ ಶ್ರೀಮತಿ ಕಡ್ಯದ ತಿಲಕಮಣಿ ಮತ್ತು ಅವರ ಮಗಳು ಜೋಗಿ ಜನಪದ ಹಾಡಿನ ನೃತ್ಯ ಪ್ರದರ್ಶನವನ್ನು ಪ್ರದರ್ಶಿಸಿ ಜನರನ್ನು ಬೆರಗುಗೊಳಿಸಿದರು. ಮಕ್ಕಳಿಗೆ ತಾಯಿಯ ಪ್ರೋತ್ಸಾಹ ಮುಖ್ಯ ಬೇಕು ಎಂಬುವುದಕ್ಕೆ ಈ ನೃತ್ಯ ಒಂದು ಉದಾಹರಣೆ. ಎಡಿಕೇರಿ ಅಶ್ವಿನಿ ಗಣಪತಿ ಮತ್ತು ಬಾರಿಕೆ ಗೀತ ಇವರ ಜೋಡಿ ನೃತ್ಯವು ಕೂಡ ತುಂಬಾ ಚೆನ್ನಾಗಿ ಮೂಡಿ ಬಂದವು. ಹಾಗೂ ಕೆಲವರಿಂದ ಶಬಾಷ್‌ಗಿರಿ ಪಡೆದರು. ಇಂತಹ ಸಾಂಸ್ಕೃತಿಕ ಕಲೆಗಳಿಗೆ ಮಕ್ಕಳ ತಂದೆ ತಾಯಿಯರು ಪ್ರೋತ್ಸಾಹ ನೀಡಬೇಕು. ಅವರವರ ಪ್ರತಿಭೆಯನ್ನು ನಾವು ಇಲ್ಲಿ ರೂಪಿಸಿಕೊಳ್ಳಲು ಅವಕಾಶ ಸಿಕ್ಕಂತೆ ಆಗುತ್ತದೆ. ಸಾಂಸ್ಕೃತಿಕ ಕಾರ್ಯ ಕ್ರಮ ಮುಗಿಯುತ್ತಿದ್ದಂತೆ ಕಾಫಿ ತಿಂಡಿಯ ಸೇವನೆಯಿತ್ತು.

ಪ್ರಥಮವಾಗಿ, ಅತಿಥಿಗಳಲ್ಲಿ ಒಬ್ಬರಾದ ಸ್ವಾಗತ ಸಮಿತಿಯ ಅಧ್ಯಕ್ಷರು ಆದ ಶ್ರೀ ಅಯ್ಯಂಡ್ರ ಭೀಮಯ್ಯನವರನ್ನು, ಸಂತೋಷ ಕೂಟ ಸಮಿತಿ ಉಪಾಧ್ಯಕ್ಷಿಣಿಯರಾದ ಕುದುಪಜೆ ಶ್ರೀಮತಿ ಶಾಂತಿ ಬೋಜಪ್ಪನವರನ್ನು, ಕುಶಾಲನಗರ ಗೌಡ ಸಮಾಜದ ಅಧ್ಯಕ್ಷರಾದ ಶ್ರೀ ಕೋರನ ಪೂಣಚ್ಚನವರನ್ನು, ಗೌಡ ಯುವಕ ಸಂಘದ ಅಧ್ಯಕ್ಷರಾದ ಪೊನ್ನಚ್ಚನ ಶ್ರೀ ಮೋಹನ್‌ನವರನ್ನು, ಕುಶಾಲನಗರ ಗೌಡ ಸಮಾಜದ ಕಾರ್ಯದರ್ಶಿ ಕೊಡಗನ ಶ್ರೀ ರಮೇಶನವರನ್ನು ವೇದಿಕೆಯ ಮೇಲೆ ಹಾರ ಹಾಕಿ ಸ್ವಾಗತ ಸಮಿತಿಯ ಉಪಾಧ್ಯಕ್ಷರಾದ ಮೂಟೇರ ನಂಜುಂಡನವರು ಸ್ವಾಗತಿಸಿದರು. ಸೂದನ ಐಯಪ್ಪ ಮತ್ತು ಪೋರೆರ ಅಮ್ಮವ್ವ ಅವರಿಂದ ದೀಪ ಅಲಂಕೃತವಾಯ್ತು. ಕುಮಾರಿ ಪೆರುಬಾಯಿ ಪುಷ್ಪನವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಮೊದಲುಗೊಂಡವು. ಮೊದಲಿಗೆ ಹಿರಿಯರಿಗೆ ಸನ್ಮಾನ ಕಾರ್ಯಕ್ರಮ:

1. ಕುಯ್ಯಮುಡಿ ಸುಬ್ರಾಯನವರ ಕಿರು ಪರಿಚಯವನ್ನು ಪರಿಚಯಿಸಿ ಅವರಿಗೆ ಕುಞ್ಞಳಿರ ಡಾ. ಬೋಪಣ್ಣನವರು ಹಾರಹಾಕಿ, ಶಾಲು ಹೊದಿಸಿ ಸನ್ಮಾನ ಮಾಡಿದರು.

2. ಶಿರಗಜ್ಜೆ ಭರತ್, ಇಂಜಿನಿಯರ್ ಅವರಿಗೆ, ಅವರು ಕೆಲವು ಅಣೆಕಟ್ಟುಗಳಲ್ಲಿ ಕಾರ್ಯ ನಿರ್ವಹಿಸಿದ ಕೆಲವು ಕಾಮಗಾರಿಯನ್ನು ನಿರೂಪಿಸಿ ಅವರ ಕೆಲವು ಕಿರು ಪರಿಚಯವನ್ನು ಜನರಿಗೆ ಪರಿಚಯಿಸಿ ಅವರಿಗೆ ಸೂದನ ಅಯ್ಯಪ್ಪನವರು ಹಾರ ಹಾಕಿ, ಶಾಲು ಹೊದಿಸಿ ಸನ್ಮಾಸಿದರು.

3. ಮುಳ್ಳು ಸೋಗೆ ಗ್ರಾಮದ ನಿವಾಸಿ ಕಾಳಪ್ಪ ಉಪಧ್ಯಾಯರು ಅವರು ನಡೆದು ಬಂದ ಹಾದಿಯ ಕೆಲವು ನೋವು ನಲಿವುಗಳ ವಿಷಯವನ್ನು ಜನರಿಗೆ ಪರಿಚಯಿಸಿ ಅವರನ್ನು ನಿವೃತ್ತ ಉಪಾಧ್ಯಾಯರಾದ ಪೆರುಬಾಯಿ ಚಿಣ್ಣಪ್ಪನವರು ಹಾರ ಹಾಕಿ, ಶಾಲು ಹೊದಿಸಿ ಸನ್ಮಾಸಿದರು.

4. ಮುಕ್ಕಾಟಿ ಶ್ರೀಮತಿ ಮುತ್ತಮ್ಮನವರು ನಿವೃತ್ತ ಮಹಿಳಾ ತಹಸೀಲ್ದಾರರು. ಇವರು ನಮ್ಮ ಗೌಡ ಜನಾಂಗದಲ್ಲಿ ಮೊದಲಿಗರೆಂದು ಹೇಳಬಹುದು. ಇವರು ನಡೆದು ಬಂದ ಹಾದಿ.

---

ಶೂರತನವು ದೇಹದ ಗುಣವಲ್ಲ, ಆತ್ಮದ ಗುಣ.

ಅವರ ಸೇವೆ, ಹಾಗೂ ಅವರ ಕಿರು ಪರಿಚಯವನ್ನು ಜನರಿಗೆ ಪರಿಚಯಿಸಿ ಅವರನ್ನು ಬಿಟ್ಟೀರ ಅಮ್ಮಾಜಿಯವರು ಹಾರ ಹಾಕಿ ಶಾಲು ಹೊದಿಸಿ ಸನ್ಮಾನಿಸಿದರು.

5. ದೊಡ್ಡೇರ ಚಂಗಪ್ಪ, ಇವರು ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. ಅವರು ಈ ಸಭೆಗೆ ಕಾರಣಾಂತರದಿಂದ ಗೈರು ಹಾಜರಾಗಿದ್ದರು.

6. ಕುಳ್ಳಿರ ಗಣಪತಿಯವರು ನಿವೃತ್ತ ಆರೋಗ್ಯ ಇಲಾಖೆಯ ಮೇಲ್ವಿಚಾರಕರು ಆದ ಇವರು ಕೂಡ ಈ ಸಭೆಗೆ ಅನಾರೋಗ್ಯದ ಕಾರಣ ಗೈರು ಹಾಜರಾಗಿದ್ದರು. ಇಂದಿನ ಸನ್ಮಾನಕಾರ್ಯ ಕ್ರಮುವನ್ನು ಕೊಡಗನ ರಮೇಶನವರು ನಿರೂಪಿಸಿದರು.

ಒಂದು ಕಡೆ ಭೋಜನ ಕೂಟವಾದರೆ, ಇನ್ನೊಂದೆಡೆ ಕಲಾ ಪ್ರದರ್ಶನ ಮತ್ತು ಹಾಡುಗಾರಿಕೆ ಇವುಗಳು ನಡೆದವು. ಭೋಜನ ಕೂಟ ಮುಕ್ತಾಯವಾದಂತೆ ಸಮಾರಂಭವು ಆರಂಭ ಗೊಂಡಿತು. ಒಂದನೇ ಸಾಲಿನ ಬಹುಮಾನ ವಿತರಣೆಯನ್ನು ತಾ. 17 ರಂದು ಶನಿವಾರ ನಡೆದ ಕ್ರೀಡಾ ಕೂಟಗಳಲ್ಲಿ ಗೆದ್ದ ಸ್ಪರ್ಧಿಗಳಿಗೆ ಸಮಾರಂಭದ ಅಧ್ಯಕ್ಷರಾದ ಕೋರನ ಪೂಣಚ್ಚನವರು ಪುಟ್ಟ ಮಕ್ಕಳ ಸ್ಪರ್ಧಿಗಳಿಗೆ ಬಹುಮಾನ ವಿತರಿಸಿದರು.

5 ರಿಂದ 10 ವಯಸ್ಸಿನ ಎಳೆಯರು ಭಾಗವಹಿಸಿ ಗೆದ್ದ ಸ್ಪರ್ಧಿಗಳಿಗೆ ಯುವಕ ಸಂಘದ ಅಧ್ಯಕ್ಷರಾದ ಪೊನ್ನಚ್ಚನ ಮೋಹನ್‌ನವರು ಬಹುಮಾನ ವಿತರಿಸಿದರು. 10 ರಿಂದ 15 ವಯಸ್ಸಿನ ಅಂತರದಲ್ಲಿ ಭಾಗವಹಿಸಿ ಗೆದ್ದ ಸ್ಪರ್ಧಿಗಳಿಗೆ ಮಹಿಳಾ ಸಂಘದ ಅಧ್ಯಕ್ಷರಾದ ಕುದುಪಜೆ ಶಾಂತಿ ಬೋಜಪ್ಪನವರು ಬಹುಮಾನ ವಿತರಿಸಿದರು.

30 ವಯಸ್ಸಿನ ಸ್ತ್ರೀಯರು ಹಾಗೂ ಪುರುಷರು ಭಾಗವಹಿಸಿದ ಸ್ಪರ್ಧಿಗಳಿಗೆ ಸ್ವಾಗತ ಸಮಿತಿಯ ಅಧ್ಯಕ್ಷರಾದ ಅಯ್ಯಂಡ್ರ ಭೀಮಯ್ಯನವರು ಬಹುಮಾನ ವಿತರಣೆ ಮಾಡಿದರು. 30 ರಿಂದ 50 ವಯಸ್ಸಿನ ಪುರುಷ ಹಾಗೂ ಮಹಿಳೆಯರು ಭಾಗವಹಿಸಿದ ಸ್ಪರ್ಧಿಗಳಿಗೆ ಸ್ವಾಗತ ಸಮಿತಿಯ ಉಪಾಧ್ಯಕ್ಷರಾದ ಮೂಟೇರ ನಂಜುಂಡ, ನಿವೃತ್ತ ಉಪಾಧ್ಯಾಯರು ಬಹುಮಾನ ವಿತರಿಸಿದರು. ಹಾಗೂ 50 ವರ್ಷ ವಯಸ್ಸಿನ ಮೇಲ್ಪಟ್ಟ ಮಹಿಳೆ ಮತ್ತು ಪುರುಷರಿಗೆ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಸ್ಪರ್ಧಿಗಳಿಗೆ ಸಂತೋಷ ಕೂಟದ ಕಾರ್ಯದರ್ಶಿ ಕೊಡಗನ ರಮೇಶರವರಿಂದ ಬಹುಮಾನ ವಿತರಣೆ ಮಾಡಲಾಯ್ತು. ಹಗ್ಗ ಜಗ್ಗಾಟದ ಸ್ಪರ್ಧಿಗಳಿಗೆ ಅಧ್ಯಕ್ಷರಾದ ಕೋರನ ಪೂಣಚ್ಚನವರು ಬಹುಮಾನ ವಿತರಿಸಿದರು. ಹಾಗೂ ಕೊನೆಯದಾಗಿ ಸಮಾರಂಭದ ಎಲ್ಲಾ ಕಾರ್ಯ ಕಲಾಪಗಳಲ್ಲಿ ಲೋಪ ದೋಷಗಳಿಲ್ಲದೆ ಕಾರ್ಯ ನಿರ್ವಹಿಸಿದ ಬೋಜನ ಸಮಿತಿಯ ಕಾರ್ಯದರ್ಶಿ ದಬ್ಬಡ್ಕ ಶಾಂತ ಮುತ್ತಪ್ಪನವರಿಗೆ ವಿಶೇಷ ಬಹುಮಾನವನ್ನು ನೀಡಲಾಯ್ತು. ಅಧ್ಯಕ್ಷರಾದ ಕೋರನ ಪೂಣಚ್ಚನವರು ಮಾತನಾಡಿ ಇಂದಿನ ಮಕ್ಕಳು ಮುಂದಿನ ಪ್ರಜೆಯಂತೆ ನಮ್ಮ ಯುವ ಜನಾಂಗದವರು ಕೆಲಸ ಕಾರ್ಯದಲ್ಲಿ ಯಾವ ಲೋಪ ದೋಷಯಿಲ್ಲದೆ ಆದರೆ ಕೆಲವೊಂದು ಕಡೆ ಘಟನೆಗಳು ನಡೆದಾಗ ಅದನ್ನು ತಿದ್ದಿಕೊಂಡು ಜನರು ಅವರೊಂದಿಗೆ ಸಹಕರಿಸಿ ಮುಂದಕ್ಕೆ ತರಬೇಕು ಎಂದು ತಿಳಿ ಹೇಳಿದರು. ವಿದ್ಯಾವಂತರಾದ ನಾವು ನಮ್ಮ ಜನಾಂಗದ ಕೆಲವೊಂದು ಸಣ್ಣಪುಟ್ಟ ವಿಶಯಗಳನ್ನು ತೊಂದರೆಗಳನ್ನು ನಿಭಾಯಿಸಿಕೊಂಡು ಹೋಗಬೇಕು. ಬೇರೆ ಜನಾಂಗದವರಿಗೆ ನಾವು ಮಾದರಿಯಾಗಬೇಕು. ಸಾಂಸ್ಕೃತಿಕ ಕಲೆಗಳಿಗೆ ತಂದೆ ತಾಯಿಯರು ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು. ಇಂತಹ ಸಂದರ್ಭದಲ್ಲಿ ಮಕ್ಕಳ ಪ್ರತಿಭೆಯನ್ನು ರೂಪಿಸಿಕೊಳ್ಳಲು ಅವಕಾಶ ಮಾಡಿ ಕೊಡಬೇಕು ಎಂದು ತಿಳಿಹೇಳಿದರು. ಊಟ ಮತ್ತು ಅದರ ವ್ಯವಸ್ಥೆ ಚೆನ್ನಾಗಿದೆ ಎಂದು ಹೇಳಿ ಅವುಗಳ ಕಾರ್ಯ ಕಲಾಪಕ್ಕೆ ಯುವಕ ಸಂಘದ ಅಧ್ಯಕ್ಷರಾದ ಪೊನ್ನಚನ ಮೋಹನ್ ಮತ್ತು ಅವರ ಸಹಚರರಿಗೆ ಮತ್ತು ಪದಾಧಿಕಾರಿಗಳಿಗೆ ಒಳ್ಳೆಯ ಪ್ರೋತ್ಸಾಹ ಮತ್ತು ಸಲಹೆ ನೀಡಬೇಕು ಎಂದರು.

ಕೊನೆಯದಾಗಿ ಕೊಡಗನ ರಮೇಶನವರ ನಯವಿನಯ ವಂದನಾರ್ಪಣೆಯು ಹೃದಯ ತಟ್ಟುವಂತಿತ್ತು.

ಈ ಸಮೂಹ ಕೂಟವು ಕೊಡಗು ವಾಲಗ ಕುಣಿತದೊಂದಿಗೆ ಕೊನೆಗೊಂಡಿತ್ತು.

— ಆಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ.

## ನ್ಯೂಸ್ ಪ್ರಿಂಟ್ ಸಬ್ಸಿಡಿ

ಸಣ್ಣ ಮತ್ತು ಮಧ್ಯಮ ಪ್ರಮಾಣದ ಪತ್ರಿಕೆಗಳಿಗೆ ನ್ಯೂಸ್ ಪ್ರಿಂಟ್ ಖರೀದಿಸಲು ಸಹಾಯಧನ ನೀಡಬೇಕೆಂಬ ಕೆಲವು ಸಂಸದರ ಬೇಡಿಕೆಯನ್ನು ಸರಕಾರ ಇತ್ತೀಚೆಗೆ ತಿರಸ್ಕರಿಸಿದೆ.

ಪತ್ರಿಕೆಗಳಿಗೆ ತೆರಿಗೆ ಇಲ್ಲದೆ ಅಗ್ಗದರದಲ್ಲಿ ವಿದೇಶಿ ನ್ಯೂಸ್ ಪ್ರಿಂಟ್ ಖರೀದಿಗೆ ಈಗಾಗಲೇ ಅನುಮತಿ ನೀಡಲಾಗಿರುವುದರಿಂದ ಸಹಾಯಧನ ನೀಡಲು ಸಾಧ್ಯವಿಲ್ಲ ಎಂದು ಕೈಗಾರಿಕಾ ಸಚಿವ ಮುರಸೋಳಿ ಮಾರನ್ ಸ್ಪಷ್ಟಪಡಿಸಿದ್ದಾರೆ.

ದೇಶೀಯ ನ್ಯೂಸ್ ಪ್ರಿಂಟ್ ಬೆಲೆಯಲ್ಲಿ ಹೆಚ್ಚಳವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯಾದರು ಸರಕಾರ ಕಂಪೆನಿವಾರು ಬೆಲೆ ಪಟ್ಟಿಯನ್ನು ಹೊಂದಿಲ್ಲ. ವಿವಿಧ ಮಿಲ್‌ಗಳ ನಡುವಣ ನ್ಯೂಸ್ ಪ್ರಿಂಟ್ ಧಾರಣೆಯಲ್ಲಿ ವ್ಯತ್ಯಾಸವಿದೆ. 1998ರಲ್ಲಿ ಟನ್‌ವೊಂದಕ್ಕೆ 15ಸಾವಿರದಿಂದ 22,500ರೂ. ಗಳಷ್ಟಿದ್ದ ನ್ಯೂಸ್ ಪ್ರಿಂಟ್ ಬೆಲೆ 2000ನೇ ಇಸವಿಯಲ್ಲಿ 16,500ರಿಂದ 29,000ಕ್ಕೆ ತಲುಪಿದೆ. ಇದೇ ವೇಳೆ ವಾರ್ಷಿಕ ಉತ್ಪಾದನಾ ಪ್ರಮಾಣ 5.25 ಲಕ್ಷದಿಂದ 4.63 ಲಕ್ಷ ಟನ್‌ಗಳಿಗೆ ಇಳಿದಿದೆ.

— ಸಂಗಾತಿ.

# ಸುಂಟಿಕೊಪ್ಪದಲ್ಲಿ ಹಿಂದೂ ರುದ್ರಭೂಮಿಯ ರೂವಾರಿ : ಶ್ರೀ ಗುಡ್ಡೆಮನೆ ಎ ದೇವಯ್ಯ (ಬಾಬು)



ಹುಟ್ಟಿ ಬೆಳೆದು ನಶ್ವರಗೊಳ್ಳುವ ಮನುಷ್ಯ ಶರೀರ ಇರುವಾಗ ನಾಗರಿಕ ಸಮಾಜಕ್ಕೆ ಏನಾದರೊಂದು ಒಳ್ಳೆಯ ಕಾರ್ಯವನ್ನು ಮಾಡಿ ಮಣ್ಣಿನ ಋಣ ತೀರಿಸಬೇಕೆಂಬ ಹಂಬಲ ಅನೇಕರಿಗಿರು ವಂತೆ, ತೋಟ ಕಾರ್ಮಿಕರೇ ತುಂಬಿಹೋಗಿರುವ, ಬಡತನ ರೇಖೆಗಿಂತ ಕಡಿಮೆ ಜನಸಂಖ್ಯೆಯ ನಿವಾಸಿಗಳುಳ್ಳ ಸುಂಟಿಕೊಪ್ಪ ನಗರದ ಹಿಂದೂ ನಿವಾಸಿಗಳಿಗೆ ವ್ಯವಸ್ಥಿತ ರುದ್ರಭೂಮಿಯೊಂದನ್ನು ನಿರ್ಮಿಸಿದ ಕೀರ್ತಿ ಸುಂಟಿಕೊಪ್ಪದ ಗುಡ್ಡೆ ಮನೆ ಎ. ಬಾಬು ಅವರಿಗೆ ಸಲ್ಲಬೇಕು.

ಹಿಂದೂಗಳಾಗಿ ಹುಟ್ಟಿ ಬೆಳೆದ ಅನೇಕ ಗಣ್ಯರು ಇಂತಹ ಕೆಲಸಗಳಿಗೆ ತಲೆ ಕೆಡಿಸಿಕೊಂಡಂತೆ ಎಂದೂ ದುಡಿಯದೆ ಇರುವ ಸಂದರ್ಭದಲ್ಲಿ ಸುಂಟಿಕೊಪ್ಪ ಮಾದಾಪುರ ರಸ್ತೆಯಲ್ಲಿರುವ 70ಸೆಂಟು ರುದ್ರಭೂಮಿ ಜಾಗದಲ್ಲಿ ವ್ಯವಸ್ಥಿತವಾದ ರುದ್ರಭೂಮಿಯೊಂದನ್ನು ಬಾಬು ಅವರು ಹುಟ್ಟು ಹಾಕಿದ್ದಾರೆ. ದಿನಾಂಕ28-12-2000 ದಿಂದ ರುದ್ರ ಭೂಮಿ ಕಾರ್ಯಾರಂಭಕ್ಕೆ ಸಿದ್ಧವಾಗಿದೆ. ಸುಮಾರು 2ಲಕ್ಷ 39 ಸಾವಿರದ 590 ರೂ. ವೆಚ್ಚದಲ್ಲಿ ಈ ರುದ್ರಭೂಮಿ ನಿರ್ಮಾಣಗೊಂಡಿದೆ.

ಧರ್ಮಸ್ಥಳದ ಸಾಮಾಜಿಕ ಅಭಿವೃದ್ಧಿ ಕೆಲಸಗಳ ಯೋಜನೆಯಂತೆ ಹಿಂದೂ ರುದ್ರ ಭೂಮಿ ನಿರ್ಮಾಣಕ್ಕೆ ಧನ ಸಹಾಯ ನೀಡಲಾಗುವುದೆಂದೂ ಅದರ ಅಧಿಕಾರಿಗಳು ಪತ್ರಿಕೆಯಲ್ಲಿ ಜಾಹೀರಾತು ನೀಡಿದನ್ನು ಕಂಡ ಬಾಬು ಕೂಡಲೇ ಧರ್ಮಸ್ಥಳ ಧರ್ಮಾಧಿಕಾರಿ ವಿರೇಂದ್ರ ಹೆಗಡೆ ಅವರಿಗೆ ಅರ್ಜಿಯೊಂದನ್ನು ಸಲ್ಲಿಸಿ ಸುಂಟಿಕೊಪ್ಪ ರುದ್ರಭೂಮಿ ನಿರ್ಮಾಣಕ್ಕೆ ಸಹಕಾರ ಕೋರಿದರು.

ಅದರಂತೆ ಅಲ್ಲಿಯ ಇಂಜಿನಿಯರ್‌ಗಳು ಇಲ್ಲಿಗೆ ಬಂದು ಸ್ಥಳ ಪರಿಶೀಲಿಸಿ ನಕಾಶೆ ತಯಾರಿಸಿ ಶೇ. 60ರಷ್ಟು ಹಣ ಬ್ಯಾಂಕಿನಲ್ಲಿ ಠೇವಣಿ ಇಟ್ಟ, ನಂತರ ಇದರ ಅಭಿವೃದ್ಧಿಗೆ ಧರ್ಮಸ್ಥಳದ ಈ ಯೋಜನಾ ಸಮಿತಿ ಶೇ. 40ರಷ್ಟು ಹಣ ನೀಡುವುದೆಂದು ತಿಳಿಸಿದಂತೆ 24ಮಂದಿ ಸದಸ್ಯರ ಸಮಿತಿ ರಚಿಸಿ ಜಿ.ಎ. ಬಾಬು ಅದರ ಅಧ್ಯಕ್ಷರಾಗಿ, ಅಶೋಕಶೇಟ್ ಕಾರ್ಯದರ್ಶಿಯಾಗಿ ಸಾರ್ವಜನಿಕರಿಂದ 1,71,390ರೂಪಾಯಿ ಸಂಗ್ರಹಿಸಿದರು. ಧರ್ಮಸ್ಥಳದಿಂದ ರೂ. 36ಸಾವಿರ ನಗದು ಮತ್ತು 44 ಸಾವಿರ ರೂ. ವೆಚ್ಚದ ಸೀಲ್ಕನ್ ಚೇಂಬರ್ ಇಲ್ಲಿಗೆ ಬಂದು ತಲುಪಿ ರುದ್ರಭೂಮಿಯ ಎಲ್ಲ ಕೆಲಸಗಳು ಪೂರ್ಣ ಗೊಂಡು ರುದ್ರಭೂಮಿಯ ಸುತ್ತ ರಕ್ಷಣೆ ಗೋಡೆ ನಿರ್ಮಾಣ, ಮುಖ್ಯ ದ್ವಾರಕ್ಕೆ ಕಬ್ಬಿಣದ ಗೇಟು, ರುದ್ರಭೂಮಿಯ ಒಳಭಾಗದಲ್ಲಿ ಶವವನ್ನು ಇಡಲು ತಂಗುದಾಣ, ಸೌದೆ ಸಂಗ್ರಹಿಸಿ ಇಡಲು ಗೋದಾಮು ಎಲ್ಲವೂ ಅಲ್ಲಿ ನಿರ್ಮಾಣಗೊಂಡಿದೆ. ಒಂದು ಶವವನ್ನು ಸುಡಲು 80ಕೆ.ಜಿ. ಸೌದೆಯನ್ನು ರುದ್ರಭೂಮಿ ಸಮಿತಿ ನೀಡಲಿದ್ದು, ಸೌದೆಗೆ ರೂ. 500 ನಿಗದಿಪಡಿಸಿರುತ್ತಾರೆ. ಮುಂದಕ್ಕೆ ಇದಕ್ಕೊಂದು ವ್ಯವಸ್ಥಿತವಾದ ಸಮಿತಿ ರಚಿಸಿ ಇದರ ಮೇಲ್ವಿಚಾರಣೆ ಕಟ್ಟುನಿಟ್ಟಾಗಿ ನಡೆಯುವ ಹಾಗೆ ನಾನು ಖಂಡಿತ ಕಾರ್ಯ ನಿರ್ವಹಿಸುತ್ತೇನೆಂದು ಬಾಬು ಹೇಳಿದ್ದಾರೆ.

— ಸಂಗಾತಿ.

## ರಾಷ್ಟ್ರೀಕೃತ ಬ್ಯಾಂಕ್ ಶಾಖೆ ಮುಚ್ಚಲು ಅವಕಾಶವಿಲ್ಲ : ಯಶವಂತ ಸಿನ್ಹಾ.

ಇತ್ತೀಚೆಗೆ ಸಿಬ್ಬಂದಿಗಳ ಸ್ವಯಂ ನಿವೃತ್ತಿ ಯೋಜನೆಯ ಪರಿಣಾಮವಾಗಿ ಸಾರ್ವಜನಿಕ ರಂಗದ ಯಾವುದೇ ಬ್ಯಾಂಕ್‌ಗಳು ತಮ್ಮ ಶಾಖೆಗಳನ್ನು ಮುಚ್ಚಲು ಅವಕಾಶ ನೀಡುವುದಿಲ್ಲ ಎಂದು ಹಣಕಾಸು ಸಚಿವ ಯಶವಂತ್ ಸಿನ್ಹಾ ಇತ್ತೀಚೆಗೆ ಲೋಕಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಬ್ಯಾಂಕುಗಳ ದಕ್ಷತೆ ಮತ್ತು ಕಾರ್ಯಕ್ಷಮತೆ ಹೆಚ್ಚಳ ಈ ಯೋಜನೆ ಮುಖ್ಯ ಗುರಿಯಾಗಿದೆ. ಯೋಜನೆಯ ಜಾರಿಗಾಗಿ ಶಾಖೆಗಳನ್ನು ಮುಚ್ಚಲು ಅವಕಾಶವಿಲ್ಲ. ಯೋಜನೆಯನ್ನು ಜಾರಿಗೊಳಿಸುವಾಗ ಕಾರ್ಯಾಚರಣೆಗೆ ಅಗತ್ಯವಿರುವಷ್ಟು ಸಿಬ್ಬಂದಿಗಳನ್ನು ಉಳಿಸಿಕೊಳ್ಳಲು ಸೂಚಿಸಲಾಗಿದೆ. ಇದಕ್ಕಾಗಿ ಎಲ್ಲಾ ಬ್ಯಾಂಕುಗಳು ಮಾನವ ಸಂಪನ್ಮೂಲ ಕ್ರಿಯಾ ಯೋಜನೆಯೊಂದನ್ನು ಸಿದ್ಧಪಡಿಸಬೇಕಾಗಿದೆ. ತಂತ್ರಜ್ಞಾನವು ಸಾಂಪ್ರದಾಯಿಕ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬದಿಗೆ ಸರಿಸಿದೆ. ಸ್ವಯಂ ನಿವೃತ್ತಿ ಯೋಜನೆ ಹೊಸ ಕೌಶಲ್ಯ ಹೊಂದಿದ ಹೊಸ ಮುಖಗಳ ಸೇರ್ಪಡೆಗೆ ಅವಕಾಶ ಮಾಡಿಕೊಡುತ್ತದೆ ಎಂದು ವಿವರಿಸಿದ್ದಾರೆ.

— ಸಂಗಾತಿ.

ಹೆಚ್ಚು ಮಾತನಾಡುವವರು ಯಾವ ಕೆಲಸವನ್ನೂ ಸರಿಯಾಗಿ ಮಾಡುವುದಿಲ್ಲ.

# ಮರಗೋಡು ಗೌಡ ಸಮಾಜದ ಆಶ್ರಯದಲ್ಲಿ ೬ನೇ ವರ್ಷದ ನಾಡಹಬ್ಬ ಕೈಲು ಮುಹೂರ್ತ ಪ್ರಯುಕ್ತ ನಡೆದ ಸಂತೋಷಕೂಟ : ವರದಿ

ದಿನಾಂಕ 08-10-2000 ಭಾನುವಾರ ಪೂರ್ವಾಹ್ನ 10ಗಂಟೆಗೆ ಮರಗೋಡು ಗೌಡ ಸಮಾಜದ ಆವರಣದಲ್ಲಿ ೬ನೇ ವರ್ಷದ ನಾಡಹಬ್ಬ ಕೈಲು ಮುಹೂರ್ತ ಪ್ರಯುಕ್ತ ಸಂತೋಷ ಕೂಟವನ್ನು ಏರ್ಪಡಿಸಾಲಾಗಿತ್ತು. ಪ್ರಾರಂಭದಲ್ಲಿ ಕು. ಬಡುವಂಡ್ರ ಶಾಲಿನಿ ಸಹೋದರಿಯರಿಂದ ಪ್ರಾರ್ಥನೆ ಸಾಂಪ್ರದಾಯಿಕವಾಗಿ ನೇಗಿಲು - ನೊಗಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಮರಗೋಡು ಗೌಡ ಸಮಾಜದ ಅಧ್ಯಕ್ಷರಾದ ಶ್ರೀ ಬೈಮನ ಪೊನ್ನಪ್ಪನವರಿಂದ ಸಮಾರಂಭದ ಉದ್ಘಾಟನೆ. ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಪೂಳಕಂಡ ಮುತ್ತಪ್ಪನವರಿಂದ ಸರ್ವರ ಸ್ವಾಗತ. ಮಡಿಕೇರಿ ಗೌಡ ಸಮಾಜದ ಅಧ್ಯಕ್ಷರಾದ ಶ್ರೀ ತೋಟಂಬೈಲು ನಾಣಯ್ಯನವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ, ಮರಗೋಡು ಗೌಡ ಸಮಾಜದವರು ಸಮಾರಂಭವನ್ನು ಸಾಂಪ್ರದಾಯಿಕವಾಗಿ ಉದ್ಘಾಟಿಸಿ, ಕೊಡಗು ಜಿಲ್ಲಾ ಪಂಚಾಯಿತಿ, ಮಡಿಕೇರಿ ತಾಲೋಕು ಪಂಚಾಯಿತಿ ಮತ್ತು ಮರಗೋಡು ಗ್ರಾಮ ಪಂಚಾಯಿತಿಗೆ ಚುನಾಯಿತರಾದ ಗೌಡ ಜನಾಂಗದ ಜನಪ್ರತಿನಿಧಿಗಳನ್ನು ಸಮಾರಂಭಕ್ಕೆ ಆಹ್ವಾನಿಸಿ ಸನ್ಮಾಸಿರುವುದು ಪ್ರಪ್ರಥಮ ಹಾಗೂ ಇದು ಉಳಿದ ಜಿಲ್ಲೆಯ ಗೌಡ ಸಮಾಜಗಳಿಗೆ ಮಾದರಿಯಾಗಿದೆ ಎಂದು ನುಡಿದರು. ಸ್ಥಳೀಯರಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತಿ ಸಹ-ನಿರ್ದೇಶಕರಾದ ಶ್ರೀ ಕೊಂಪುಳೀರ ಕೆ. ಆನಂದನವರು, ಸಮಾಜಸೇವಕರೂ, ಕೊಡಗು ಪ್ರಜಾವೇದಿಕೆಯ ಕೇಂದ್ರ ಬಿಂದು ಆದ ಶ್ರೀ ನಂಜಯ್ಯನಮನೆ ದೇವಿಪ್ರಸಾದರವರು, ದೂರದರ್ಶನ ಕಾಲವಿದರಾದ ಶ್ರೀ ಅಮ್ಮಾಜಿರ ಪೊನ್ನಪ್ಪನವರು ಮತ್ತು ಕ್ರೀಡಾ ಪಟು ಶ್ರೀ ಹುದೇರಿ ತ್ಯಾಗರಾಜೇಂದ್ರನವರು ಸಂದರ್ಭಕ್ಕೆ ತಕ್ಕಂತೆ ತಮ್ಮ-ತಮ್ಮ ಅನಿಸಿಕೆಗಳನ್ನು ಸಭೆಗೆ ತಿಳಿಸಿದರು.

ಅತಿಥಿಗಳಾಗಿ ಸಮಾರಂಭಕ್ಕೆ ಆಗಮಿಸಿದ ಕೊಡಗು ಜಿಲ್ಲಾ ಪಂಚಾಯಿತಿಯ ಗೌಡ ಜನಾಂಗದ ಜನ ಪ್ರತಿನಿಧಿಗಳಾದ ಶ್ರೀಮತಿ ಕೋರನ ಗಂಗಮ್ಮ ಪೂಣಚ್ಚ. ಶ್ರೀ ವಕ್ಕಲಿಗರ ಪಿ. ಶಶೀಧರ, ಶ್ರೀ ವಕ್ಕಲಿಗರ ಕೆ. ದೇವಲಿಂಗಯ್ಯ, ತಾಲೋಕು ಪಂಚಾಯಿತಿ ಸದಸ್ಯ ಶ್ರೀಉಳುವಾರ ಎನ್. ಪಳಂಗಪ್ಪ ಮತ್ತು ಮರಗೋಡು ಗ್ರಾಮ ಪಂಚಾಯಿತಿಯ ಸದಸ್ಯರಾದ ಶ್ರೀಪರಿಚನ ಎಂ. ಪಳಂಗಪ್ಪ ಇವರುಗಳು ಜನಾಂಗದ ಬಗ್ಗೆ ಮತ್ತು ಜನಾಂಗದ ಸಂಘಟನೆಯ ಬಗ್ಗೆ ತಮ್ಮ ವಿಚಾರಧಾರೆಗಳನ್ನು ಸಭೆಗೆ ಸವಿಸ್ತಾರವಾಗಿ ವಿವರಿಸಿದರು. ಜಿಲ್ಲಾ ಪಂಚಾಯಿತಿಯ ಸದಸ್ಯರುಗಳಾದ ಶ್ರೀ ಹೊಸೂರು ಸತೀಸ್ ಕುಮಾರ್ ಮತ್ತು ಶ್ರೀ ಹೆಚ್. ಪಿ. ಶೇಷಾದ್ರಿಯವರು ಅಲ್ಪಕಾಲ ಸಮಾರಂಭದಲ್ಲಿ ಉಪಸ್ಥಿತರಿದ್ದು, ಪೂರ್ವ ಯೋಜಿತ ಕಾರ್ಯಕ್ರಮಗಳಿಗೆ ತೆರಳಿದರು. ಸಮಾರಂಭದಲ್ಲಿ ವೇದಿಕೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಶ್ರೀ ಕಟ್ಟೆಮನೆ ಮುರಳೀಧರ, ಶ್ರೀಮತಿಯರಾದ ಬಿದ್ರುಪಣೆ ಭಾಗ್ಯಕೇಶವ ಮತ್ತು ಮಂಡೀರ ಬೀನಾ ದೇವಯ್ಯ ಇವರುಗಳು ಉಪಸ್ಥಿತರಿದ್ದರು.

ದಿನಾಂಕ 12-9-2000 ರಂದು ಮರಗೋಡು ಸರಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಸಮಾಜದ ವತಿಯಿಂದ ಗೌಡ ಜನಾಂಗದವರಿಗಾಗಿ ನಡೆದ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಮಾಜದ ಅಧ್ಯಕ್ಷರಾದ ಶ್ರೀ ಬೈಮನ ಪೊನ್ನಪ್ಪ, ಬಹುಮಾನದ ದಾನಿಗಳಾದ ಶ್ರೀ ಕೊಂಪುಳೀರ ಆನಂದ, ಶ್ರೀ ಬಳಪದ ಸೋಮಣ್ಣ ಮತ್ತು ಶ್ರೀಮತಿ ಕಟ್ಟೆಮನೆ ಪ್ರೇಮಾ ಗಣೇಶ ಇವರುಗಳು ಬಹುಮಾನವನ್ನು ವಿತರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಬೈಮನ ಪೊನ್ನಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮಾತನಾಡುತ್ತಾ, ಸಮಾಜದ ಕೆಲಸವು ಇನ್ನೂ ಪೂರ್ತಿಯಾಗಿಲ್ಲ, ಸಹೃದಯಿ ದಾನಿಗಳು ಉದಾರತೆಯಿಂದ ತಮ್ಮ ಸಹಕಾರ -ಸಹಾಯವನ್ನು ನೀಡಬೇಕೆಂದು ಕರೆನೀಡಿದರು. ಸಾಂಪ್ರದಾಯಿಕ ಮಧ್ಯಾಹ್ನದ ಊಟದ ನಂತರ ಸ್ಥಳೀಯ ಪ್ರತಿಭೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಯಿತು. ಭಾವಗೀತೆ, ಸುಗಮ ಸಂಗೀತ, ಶೋಭಾನೆ ಹಾಡು, ಜಾನಪದ ನೃತ್ಯ ಹಾಗೂ ಇನ್ನಿತರ ನೃತ್ಯಗಳನ್ನು ಸ್ಥಳೀಯ ಕಲಾಪ್ರತಿಭೆಗಳು ಪ್ರದರ್ಶಿಸಿ ಪ್ರೇಕ್ಷಕರ ಮನತಣಿಸಿದರು. ಕಾರ್ಯಕ್ರಮವನ್ನು ಶ್ರೀ ಮಳ್ಳಂದಿರ ಉಶ್ವಪತಿ ಮತ್ತು ಶ್ರೀ ಜೈನೀರ ವೆಂಕಟೇಶನವರು ನಿರೂಪಿಸಿದರಲ್ಲದೆ ಶ್ರೀ ಕಟ್ಟೆಮನೆ ಜನಾರ್ಧನರವರು ಸರ್ವರನ್ನು ವಂದಿಸಿದರು.

— ವರದಿ : ಜೈನೀರ ವೆಂಕಟೇಶ್, ಮರಗೋಡು

---

*ನಗೆಹನಿ : ಕೊನೆ ಆಸೆ.*

ಜೈಲ್ ವಾರ್ಡನ್ "ನಿಮ್ಮಿಬ್ಬರ ಕೊನೆ ಆಸೆ ಹೇಳಿ"

ಇಂವ : "ನಂಗೆ ಒಮ್ಮೆ ಭಾಷಣ ಮಾಡಿಕೆ ಅವಕಾಶ ಮಾಡಿಕೊಡಿ"

ಅಂವ : "ಆ ಭಾಷಣ ಮಾಡಿಕೆ ಮುಂಚೆ ನನ್ನ ಫಾಸಿಗೆ ಹಾಕಿಬುಡಿ"

---

# ಹುಲಿ ಮೀಸೆ

— ಬಿ. ಆರ್. ಜೋಯಪ್ಪ

ಆ ಊರಿನ ಕಾಡಿನಂಚಿನ ಹಾಡಿಗಳಲ್ಲಿ ಚೋಮನದೂ ಒಂದು. ಶಿಕಾರಿ ಅವನ ಅಪ್ಪನಿಂದ ಬಂದ ಬಳುವಳಿ. ಕಂಡವರ ಕೋವಿಯಿಂದ ಬದುಕಿದವ ಚೋಮ.

ಕಾಡುಕೋಣದ ಉಪ್ಪಣವನ್ನು (ಒಣ ಮಾಂಸ) ಕಡವೆಯ ಉಪ್ಪಣವೆಂದು ಕೆಲವರಿಗೆ ತಿನ್ನಿಸಿದ್ದ ಭೂಪ.

ಚಂಗಪ್ಪ ಆ ಊರಿನಲ್ಲಿ ಎದ್ದು ಕಾಣುವ ಕುಳ. ಒಳ್ಳೆಯ ಒಂಟಿನಳಿಕೆಯ ತೋಟಾ ಕೋವಿಯನ್ನು ಇಟ್ಟುಕೊಂಡಿದ್ದ. ಆದರೆ ಬೇಟೆಗಾರನಲ್ಲ. ಹಗಲು ಹೆಗಲ ಮೇಲೆ ಕೋವಿ ಇಟ್ಟು ಕೊಂಡು ಗದ್ದೆ, ತೋಟದ ಸುತ್ತ ತಿರುಗುತ್ತಿದ್ದ. ನೋಡಿದವರು ಹೆದರಲಿ ಅನ್ನುವ ಕಾರಣಕ್ಕೋ ಏನೋ ಕೆಲವೊಮ್ಮೆ ಸದ್ದು ಗುಂಡು ಹೊಡೆಯುತ್ತಿದ್ದುದೂ ಉಂಟು. ಅಂತೂ ತಾನು ಕೋವಿ ಇಟ್ಟುಕೊಂಡ ವಿಚಾರವನ್ನು ಈ ರೀತಿ ಪ್ರಚಾರಕ್ಕೆ ತಂದಿದ್ದ. ಒಂದೇ ಒಂದು ಪ್ರಾಣಿಯ ಕಾಲನ್ನೂ ಮುರಿದವನಲ್ಲ. ಇಂಥವನ ನಂಬಿಕೆಯ ವ್ಯಕ್ತಿ ಚೋಮ. ಆ ಕೋವಿಯ ಪೂರ್ಣ ಬಳಕೆಯಾಗುತ್ತಿದ್ದುದು ಚೋಮನಿಂದಲೇ. ಚೋಮ ಧೈರ್ಯವಂತ, ಬೇಟೆಗಾಗಿ ಊಟ ನಿದ್ದೆಯನ್ನು ಬಿಟ್ಟು ಕಾಡಿನಲ್ಲೇ ರಾತ್ರಿ ಕಳೆದ ಪೈಕಿ. ಇವನು ಬೇಟೆ ಕಲಿತ ಶುರುವಿನಲ್ಲೊಮ್ಮೆ :

ನಾಲ್ಕು ಜನ ಬೇಟೆಗಾರರ ಬೆನ್ನು ಹತ್ತಿದ್ದ. ಆಗಿನ್ನೂ ಕಾಡಿನ ಮರ್ಮವನ್ನು ಅರಿಯದವನಾಗಿದ್ದ. ಕಾಡಿನಲ್ಲಿ ಒಂದು ಕಡೆ ಹಸು ಸತ್ತಿತ್ತು. ಹುಲಿಯೋ ಚಿರತೆಯೋ ಅದನ್ನು ಕೊಂದಿರಬೇಕು. ಜಡ್ಡಿನ* ಮೂಳೆ ಜಗಿಯಲು ಕಾಡುಹಂದಿಗಳು ಬರುತ್ತಿದ್ದವು. ಹಸು ಸತ್ತ ಅಷ್ಟಿಷ್ಟು ದೂರದಲ್ಲಿ ನೆಲ, ಮರದಲ್ಲಿ ಬೇರೆ ಬೇರೆಯಾಗಿ ಒಳಿ ಕುಳಿತರು. ಒಂದೆರಡು ಗಂಟೆ ಕಳೆದಿರಬಹುದು. ಸಂಜೆ ಸಮೀಪಿಸುತ್ತಿರಲು ಚೋಮ ಕುಳಿತೆಡೆಗೆ ಏನೋ ಬರತೊಡಗಿತು. ಕಾಡುಹಂದಿಗಳೇ ಇರಬಹುದೆಂದು ಚೋಮ ಖುಷಿಗೊಂಡ. ಆ ಸದ್ದು ಬರಬರುತ್ತಾ ಹೆಚ್ಚಾಯಿತು. ಆ ಸದ್ದಿನೆಡೆಯಿಂದ ಬಂದ ಆಕೃತಿ ದಾರಿಗಡ್ಡವಾಗಿ ನಿಂತಿತು. ನಿಂತು ಇವನನ್ನೇ ನೋಡಿತು. ಅದು ಹಂದಿಯಲ್ಲ, ಹುಲಿ! ಚೋಮ ಅತ್ತ ಗುರಿ ಹಿಡಿದ. ಈಡು ಮಾಡಲಿಲ್ಲ. ಗಡಗಡ ನಡುಗಿದ. ಮೈ ಬೆವರಿತು. ಅಂಗೈಯೂ ಬೆವರಿದ್ದರಿಂದ ಕೋವಿ ಜಾರಿ ಜಾರಿ ಹೋಗುತ್ತಿತ್ತು. ಇಂವ ಕುಳಿತದ್ದು ನೆಲದಲ್ಲಿ ಬಿದ್ದ ಮರದ ಮರೆಯಲ್ಲಿ. ಹುಲಿ ಮೆಲ್ಲನೆ ಅತ್ತ ದಾಟಿತು, ಚೋಮ ಕುಳಿತಲ್ಲಿಂದ ಎದ್ದು ಹಿಂದಕ್ಕೋಡಿದ. ಮರ ಹತ್ತಲು ನೋಡಿದ. ಅಲ್ಲಿದ್ದುದು ಹೆಮ್ಮರಗಳು. ಪಕ್ಕದಲ್ಲೊಂದು ಕಾರೆ ಮರವಿತ್ತು. ಆ ಮರವನ್ನೇರಲು ಯತ್ನಿಸಿದ. ಚಿಕ್ಕ ಹುಡುಗನಾಗಿದ್ದ ಚೋಮ ಕೋವಿ ಹಿಡಿದುಕೊಂಡು ಹತ್ತುವುದಾದರೂ ಹೇಗೆ? ಅದೂ ಮುಳ್ಳುಮರ ಬೇರೆ! ಅಂತೂ ಅದೇ ಮರವನ್ನೇರಿಬಿಟ್ಟ. ಅಡ್ಡ ರೆಂಬೆಯ ಮೇಲೆ ಕಾಲಿಟ್ಟ. ಮುಳ್ಳುತಾಗಲು ಅಲ್ಲಿಂದ ಕಾಲೆಳೆದುಕೊಂಡ. ಎರಡು ಮುಳ್ಳುಗಳ ಮಧ್ಯ ಪುಟ್ಟ ಪಾದವನ್ನು ನುಗ್ಗಿಸಿದ. ಮತ್ತೊಂದು ಪಾದ ತಡಕಾಡಿತು. ಮುಳ್ಳಿನ ಎಡೆಯಲ್ಲಿ ಆ ಪಾದಕ್ಕೆ ಜಾಗ ಸಿಗಲಿಲ್ಲ. ಮೊದಲಿಟ್ಟ ಪಾದದ ಮೇಲೆಯೇ ಈ ಪಾದವನ್ನು ಇಟ್ಟು ಮರವನ್ನು ತಬ್ಬಿಕೊಂಡ. ಎದೆಗೆ ಮುಳ್ಳು ತಾಗಲು ಅಳು ಬಂದಿತು. ಗಾಳಿಗೆ ಮರ ಜೂಗಲು ನರಕಯಾತನೆ ಪಟ್ಟ. ಕೋವಿಯ ತೊಳಕ್ಕೆ ಮುಳ್ಳು ತಾಗುತ್ತಲೂ ಅತ್ತ ಗಾಳಿಗೆ ಮರ ಜೂಗುತ್ತಲೂ ಕಿರ್‌ಕಿರ್ ಎಂಬ ಮೊರೆತ ಉಂಟಾಗುತ್ತಿತ್ತು. "ಇಂದೇ ಕೊನೆ, ಇನ್ನು ಮುಂದೆ ಇವರ ಸಹವಾಸ ಬೇಡ" ಅಂತ ಶಪಥ ಮಾಡಿಕೊಂಡ. ಅಂತೂ ಅಂದು ಜೀವ ಉಳಿಸಿಕೊಂಡು ಹಾಡಿಯತ್ತ ನಡೆದ. ಚೋಮ ಮತ್ತೆ ಎಂದಿಗೂ ಬೇರೆಯವರೊಡನೆ ಬೇಟೆಗೆ ಹೋಗಿದ್ದಿಲ್ಲ. ಇದಾದ ಮೇಲೆ ಒಬ್ಬನೇ ಕಾಡಿಗೆ ಹೋಗಿ ಬರಲು ರೂಢಿಸಿಕೊಂಡ.

ಬೇಟೆ ಗೀಳಲ್ಲಿ ಮೊದಮೊದಲು ಚೋಮ ಕಂಡ ಕಂಡ ಪ್ರಾಣಿಗಳ ಜೀವ ತೆಗೆದವ. ಬೇಟೆ ಮುಂದುವರಿದಂತೆಲ್ಲಾ ಚೆಂಗಪ್ಪ ಮತ್ತು ಚೋಮನ ವ್ಯವಹಾರ ವ್ಯಾಪಾರದತ್ತ ತಿರುಗಿತು. ಯಾವಾಗ ಬೇಟೆ ವ್ಯಾಪಾರದತ್ತ ತಿರುಗಿತೋ ಚೋಮ ಕೆಂಜಿರಿ, ಪಾಂಜ, ಕೋಳಿ, ಮೊಲ ಮುಂತಾದ ಪ್ರಾಣಿಗಳನ್ನು ಕೊಲ್ಲುವುದು ಬಿಟ್ಟ. ಹಂದಿ, ಕಡುವೆ, ಜಿಂಕೆಗಳೇ ಚೋಮನ ಗುರಿಯಾಯಿತು. ಒಂದೇ ರಾತ್ರಿ ಎರಡು ಕಡವೆ ಹೊಡೆದುರುಳಿದ್ದೂ ಉಂಟು. ಆದರೆ ಲಾಭವೆಲ್ಲವೂ ಚೆಂಗಪ್ಪನಿಗೆ. ದಿನ ಕಳೆದಂತೆ ಚೋಮ ಬದಲಾಗ ತೊಡಗಿದ. ಚೆಂಗಪ್ಪ ಚೋಮನಿಗೆ ಕೋವಿ ಕೊಡುವಾಗಲೆಲ್ಲಾ ತೋಟಗಳನ್ನು ಎಣಿಸಿಯೇ ಕೊಡುತ್ತಿದ್ದುದು. ಇದರಿಂದಾಗಿ ತೋಟಾವನ್ನು ಕದಿಯಲು ಆಗುತ್ತಿರಲಿಲ್ಲ. ಕೆಲವೊಮ್ಮೆ ಕಾಡುಕುರಿ ಯನ್ನೋ ಹಂದಿಯನ್ನೋ ಹೊಡೆದು 'ಒಳಗೆ ಹಾಕಿ'ಗುಂಡು ತಪ್ಪಿತೆಂದು ಸುಳ್ಳು ಹೇಳಿ ಹಣ ಸಂಪಾದಿಸಿದ್ದುಂಟು. ಚೆಂಗಪ್ಪನಿಗೆ ಸಂಶಯ ಬಂದು ಕೆಲವು ದಿನಗಳವರೆಗೆ ಅವನಿಗೆ ಕೋವಿ ಕೊಡಲು ನಿರಾಕರಿಸಿದ್ದ. ಮತ್ತೆ ಹೇಗೋ ಚೋಮ ಅಂಟಿಕೊಂಡಿದ್ದ.

ಒಮ್ಮೆ ಹಗಲು ಕಾಡಿನಲ್ಲಿ ಸುತ್ತುತ್ತಿರಲು ಕತ್ರಿಬೆಕ್ಕೊಂದು ಕಣ್ಣಿಗೆ ಕಂಡಿತು. ಈಡು ಮಾಡಿದ. ಸಿಕ್ಕಿಬಿತ್ತು. ಅದನ್ನು ಹಿಡಿದು ಕೊಂಡು ಮುಂದೆ ಹೋಗುತ್ತಿರಬೇಕಾದರೆ ಯಾರೋ ಇಬ್ಬರು ಇವನ ಕಡೆಗೆ ಗದರುತ್ತಾ ಬಂದರು. ಅವರದು ಇವನ ಕೈಯಲ್ಲಿರುವ ಕತ್ರಿಬೆಕ್ಕನ್ನು ಕಿತ್ತುಕೊಳ್ಳುವ ಹುನ್ನಾರ. "ಏಯ್ ನಿಲ್ಲೋ ನಿಲ್ಲೋ" ಎಂದರು. ಆದರೆ ಅವರ ಕೈಯಲ್ಲಿ ಕೋವಿಗೀವಿ ಇರಲಿಲ್ಲ. ಚೋಮ ಕೂಡಲೆ ಅವರ ಎದೆಗೆ ಗುರಿ ಹಿಡಿದ. ಹೆದರಿಕೊಂಡ ಅವರು ಪೇರಿಕಿತ್ತರು. ಅಂದು ಇವನ ಕೋವಿಯಲ್ಲಿ ತೋಟಾವೇ ಇರಲಿಲ್ಲ! ಇದ್ದ ಒಂದೇ ಒಂದು ತೋಟಾವನ್ನು ಕತ್ರಿಬೆಕ್ಕಿಗೆ ಹೊಡೆದು ಖಾಲಿ ಮಾಡಿದ್ದ. ಕತ್ರಿ ಬೆಕ್ಕು ಹೊಡೆದ ಸುದ್ದಿ ಚೆಂಗಪ್ಪ ನಿಗೆ ತಿಳಿಸಲಿಲ್ಲ. ಬೋಳಿ ಕಡುವೆಗೆ ಹೊಡೆದು ತಪ್ಪಿಹೋಯಿತೆಂದು ಗುಳಿಗೆ ಬಿಟ್ಟ. ಚೋಮನಿಗೆ ಬೇರೆಯವರೂ ಕೋವಿ ಕೊಡುತ್ತಿದ್ದರು. ಆದರೆ ಚೆಂಗಪ್ಪನ ಕೋವಿಯಷ್ಟು ಹಿಡಿತ ಬೇರೆಯವರ ಕೋವಿಗಿರಲಿಲ್ಲ. ಆದ್ದರಿಂದ ಇದನ್ನು 'ಜಾತಿ ಮುಖ'ದ ಕೋವಿಯೆನ್ನುತ್ತಿದ್ದ. ಈಗೀಗ ಚೋಮನಿಗೆ ಕಂಪೆನಿ ತೋಟಾವೇ ಬೇಕೆಂದಿಲ್ಲ. ತಾನೇ ಸ್ವಂತ ತೋಟಾ ತುಂಬಿಕೊಳ್ಳುವುದನ್ನು ಕಲಿತುಕೊಂಡಿದ್ದ.

ಇದಾಗಿ ಸ್ವಲ್ಪ ಸಮಯದಲ್ಲಿ ಮಳೆಗಾಲ ಶುರುವಾಯ್ತು. ಚೋಮನಿಗೆ ಬೇಟೆಯೇ ಜೀವನವಾದ್ದರಿಂದ ಮಳೆಗಾಲವನ್ನು 'ಶನಿಕಾಲ'ಎನ್ನುತ್ತಿದ್ದ.

ಮಾನವ ಹುಟ್ಟುವಾಗಲೂ ಒಬ್ಬನೇ, ಸಾಯುವಾಗಲೂ ಒಬ್ಬನೇ.

ಬತ್ತದ ಬೆಳೆ ಅವರಿವರ ಗದ್ದೆಯಲ್ಲಿ ಹಾಲು ತುಂಬಲು ಕಾಡು ಹಂದಿಗಳು ರಂಪ ಮಾಡುತ್ತಿದ್ದವು. ಆಗ ಚೋಮನ ಉದ್ಯೋಗ ಪ್ರಾರಂಭವಾಗುತ್ತಿತ್ತು. ಆ ವರ್ಷ ಚೆಂಗಪ್ಪನ ಗದ್ದೆ ಪಾರಕಾಯುವ ಕೆಲಸ ಇವನದೇ. ಸಂಜೆಯಾಗುವಷ್ಟರಲ್ಲಿ ಕುಂಟೆಗಳನ್ನು ಜೋಡಿಸಿಕೊಳ್ಳುತ್ತಿದ್ದ. ಹಾಳಾದ ಚಳಿ ಉಂಟಲ್ಲ! ರಾತ್ರಿ ಚಳಿ ಕಾಯಿಸಿಕೊಳ್ಳುತ್ತ ಆಕಳಿಸಿಕೊಳ್ಳುತ್ತ ಬೆಳಗ ಮಾಡುತ್ತಿದ್ದ. ಕದ್ದಿಂಗಳಲ್ಲಿ ಗುಂಡು ಹೊಡೆಯುವುದು ಸ್ವಲ್ಪ ಕಷ್ಟವೇ ಆಗಿತ್ತು. ಒಂದು ರಾತ್ರಿ ನಕ್ಷತ್ರದ ಬೆಳಕಿನಲ್ಲೇ ಗದ್ದೆ ಏರಿಯ ಮೇಲೆ ಹೊಂಚು ಹಾಕುತ್ತಾ ಚಪ್ಪರಿಸಿ ಬೆಳೆಯನ್ನು ತಿನ್ನುವ ಹಂದಿಯ ಸಮೀಪ ಹೋದ. ಅಂದಾಜಿನಲ್ಲೇ ಗುಂಡು ಹೊಡೆದ. ದಡ್ಡ್* ಹಂದಿ ಉರುಳಿತು. ಇದಾಗಿ ವಾರ ಕಳೆದಿರಬಹುದು. ಅದೇ ಗದ್ದೆಯಲ್ಲಿ ಒಂಟಿಗ ಹಂದಿಯನ್ನೂ ಹೊಡೆದಿದ್ದ. "ಹಾ! ಕೋವಿಯೆಂದರೆ ಇದು, ರಾಮಬಾಣ" ಅಂದುಕೊಳ್ಳುತ್ತಿದ್ದ.

ಬೆಳೆ ಕೆಲಸದ ಬಳಿಕ ಚೋಮ ಕಾಡಿನ ವಾಸಿ. ಇವರ ಬೇಟೆ ವ್ಯವಹಾರ ಅರಣ್ಯ ಇಲಾಖೆಗೆ ಗೊತ್ತಿತ್ತು. ಒಮ್ಮೆ ಚೋಮ ಕಡುವೆ ಹೊಡೆದಿದ್ದ. ಚೆಂಗಪ್ಪ ಮತ್ತು ಅವನ ಆಳುಗಳು ಕಡುವೆಯ ಚರ್ಮ ಸುಲಿಯುತ್ತಿದ್ದರು. ಅರ್ಧ ಭಾಗದ ಚರ್ಮ ಜಾರಿಸಿರಬಹುದು. ಅಷ್ಟರಲ್ಲಿ ಅರಣ್ಯ ಇಲಾಖೆಯವರು ಬರಬೇಕೆ? ಅಷ್ಟಕ್ಕೇ ಬಿಟ್ಟು ಓಡಿದರು. ಆದರೆ ಇದರ ನಷ್ಟವನ್ನು ಅನಂತರದ ದಿನಗಳಲ್ಲಿ ಭರ್ತಿ ಮಾಡಿಕೊಂಡರೆನ್ನಿ. ಈ ನಡುವೆ ಚೆಂಗಪ್ಪನಿಗೆ ಚೋಮನ ಬಗ್ಗೆ ವಿಶ್ವಾಸ ಕಡಿಮೆಯಾಗುತ್ತಾ ಬರುತ್ತಿತ್ತು. ಅದಕ್ಕೆ ಕಾರಣ ಆ ಊರಿನ ಅಣ್ಣಿ ಎಂಬವ. ಅಣ್ಣಿ ಆಗಾಗ ಚೆಂಗಪ್ಪನ ಮನೆಗೆ ಬಂದು ಹೋಗುತ್ತಿದ್ದ. ಒಂದು ವಾರದ ಮಟ್ಟಿಗಾದರೂ ಕೋವಿ ಕೊಡಿ ಎಂದು ಪೀಡಿಸುತ್ತಿದ್ದ. ಚೋಮನ ಕೈಯಿಂದ ಕೋವಿಯನ್ನು ಹಿಂದಕ್ಕೆ ಪಡೆಯುವ ಸಮಯಕ್ಕಾಗಿ ಚೆಂಗಪ್ಪ ಕಾಯುತ್ತಿದ್ದ.

ಚೋಮ ಒಮ್ಮೆ ಸೀಗೆ ತಡೆಯ ಬಳಿ ಮರದ ಮೇಲೆ ಒಳಿ ಕುಳಿತಿದ್ದ. ಅದು ಕಾಡು ಹಂದಿ ದಾಟುವ ಕಡು. ಸಂಜೆ ಮೂರು ನಾಲ್ಕು ಗಂಟೆಯಾಗಿದ್ದಿರಬಹುದು. ಸೂರ್ಯನ ಹೊಂಬಣ್ಣ ಸುತ್ತೆಲ್ಲ ಹರಡಿತ್ತು. ಬೆಳೆ ತಿಂದು ಕೊಬ್ಬಿನ ಹಂದಿ ಹೇಗಿರಬಹುದು? ಹಾ! ತುಪ್ಪಗಟ್ಟಿಯೇ ನೆನೆದು ಖುಷಿಗೊಂಡ. ಹೀಗೆ ಯೋಚಿಸುತ್ತಿರಲು ದೂರದಲ್ಲಿ ಕಪಿಗಳು ಬೆದರಿ ಕೂಗುವ ಸದ್ದು ಕೇಳಿಸಿತು. ಇನ್ನು ಸ್ವಲ್ಪ ಹೊತ್ತಿನಲ್ಲಿ ಸರಸರಾ ಸದ್ದು ಕೇಳಲು ಕ್ಷಣದಲ್ಲಿ ಕಾಡುಕುರಿಯೊಂದು ನೆಗೆದು ನೆಗೆದು ಓಡಿತು. ಯಾಕಿರಬಹುದು? ಹೀಗೆ ಮನ ನುಡಿದುಕೊಳ್ಳುತ್ತಿತ್ತು. ಅಷ್ಟರಲ್ಲಿ ಮೆದುನಡಿಗೆಯ ಸದ್ದು. ಮಿರಮಿರ ಮಿರುಗುವ ಒಂದು ಪ್ರಾಣಿ. ಅರರೇ ಹುಲಿ! ನೀಳದೇಹದ, ಉದ್ದಬಾಲದ, ತುಂಡು ಕಿವಿಯ ಪಟ್ಟೆ ಪಟ್ಟೆಯ ಹೆಬ್ಬುಲಿ! ತಾನು ಬೇಟೆ ಕಲಿತ ಶುರುವಿನಲ್ಲಿ ಹುಲಿ ಕಂಡು ಕಾರೆ ಮರ ಹತ್ತಿದ ನೆನಪು ಕಣ್ಮುಂದೆ ಮಿಂಚಿತು. ಆದರೆ ಇಂದು ಚೋಮ ಈ ಹೆಬ್ಬುಲಿಗೆ ಜಗ್ಗಲಾರದ ವ್ಯಕ್ತಿ. ಮರದ ಮೇಲೆ ಕುಳಿತವನಿಗೆ ಇನ್ನೇಕೆ ಭಯ? ಉಂಡೆ ತೋಟಾವನ್ನೇ ಕೋವಿಗಿಳಿಸಿದ್ದರಿಂದ 'ಇದನ್ನು ಮಣ್ಣು ಮುಕ್ಕಿಸುತ್ತೇನೆ' ಎಂದು ಆ ಹುಲಿಯತ್ತ ಗುರಿ ಹಿಡಿದ. ಹುಲಿ ಅತ್ತಿತ್ತ ನೋಡಿತು. ಮುಂಗೈಯನ್ನೊಮ್ಮೆ ನೆಕ್ಕಿಕೊಂಡಿತು. ಕಟಬಾಯನ್ನು ನೆಕ್ಕಿ ನೆಲಮೂಸಿತು. ಚೋಮ ಹುಲಿಯ ಕೈ ಪಾರೆಗೆ ಗುರಿ ಹಿಡಿದು ಟ್ರಿಗರನ್ನು ಅದುಮಿದ. ಎದೆಗೆ ಒದ್ದು ಗುಂಡು ಸಿಡಿಯಿತು. ಹುಲಿ ಒಮ್ಮೆ ಅತ್ತ ತಳ್ಳಲ್ಪಟ್ಟು ಮುಗ್ಗರಿಸಿತು. ಪಂಜದಿಂದ ನೆಲವನ್ನು ಪರಚಿತು. ಆರ್ಭಟಿಸುತ್ತ ಹಾರಿ ಬಲ ಮಗ್ಗುಲಾಗಿ ಬಿದ್ದಿತು. ಚೋಮ ಕೋವಿಯನ್ನು ಹೆಗಲಿಗೆ ನೇತುಹಾಕಿಕೊಂಡು ಸರಸರನೆ ಮರದಿಂದ ಇಳಿದ. ಖುಷಿಗೊಂಡು ವಿಷಯವನ್ನು ಚೆಂಗಪ್ಪನಿಗೆ ತಿಳಿಸಲು ಓಡಿದ.

"ಗೌಡ್ರೇ, ಓ ಗೌಡ್ರೆ"

" ಓ, ಯಾರು?"

"ನಾನು ಗೌಡ್ರೆ, ಚೋಮ"

"ಏನು?ಒಂದು ಗುಂಡು ಕೇಳ್ತಲ್ಲ, ಹೋಯ್ತಾ?"

"ಇಲ್ಲ ಗೌಡ್ರೆ ಬಿದ್ದಿದೆ"

"ಯಂಥದು!"

"ಹುಲಿ ಗೌಡ್ರೆ, ಹುಲಿ, ಹೆಬ್ಬುಲಿ"

ಚೆಂಗಪ್ಪ ಮೀಸೆ ಕೆಳಗೆ ನಕ್ಕ. ಚೋಮನ ಮೋಸಗಾರಿಕೆಯನ್ನು ನೆನೆದ. ಹಂದಿಯನ್ನೋ, ಕಡುವೆಯನ್ನೊ ಹೊಡೆದಿರಬಹುದು. ಹುಲಿಯನ್ನೇ ಹೊಡೆದಿದ್ದೇನೆಂದರೆ ಹೋಗಲಿಬಿಡು ಅಂತ ಹೇಳಬಹುದೆಂದು ಕೊಂಡಿದ್ದಾನೆಂದು ಕಾಣುತ್ತೆ ಹೀಗೆಂದು ಚೋಮನ ಮೇಲೆ ಸಂಶಯಪಟ್ಟನಾದರೂ ಹುಲಿ ಹೊಡೆದರೂ ಹೊಡೆದಿರಬಹುದಾ ಎಂದೂ ಪ್ರಶ್ನಿಸಿಕೊಂಡ. ಅಣ್ಣಿ ಈ ಹಿಂದೆ ಚೋಮನ ಕುರಿತು ಗುಸುಗುಸು ಹೇಳಿದ್ದನ್ನೂ ನೆನೆಸಿಕೊಂಡ.

"ನಿನ್ನ ಮೋಸ ತಟವಟ ಬೇಡ. ನಿನ್ನ ಮೋಸ ಏನೂಂತ ಗೊತ್ತು. ಇನ್ನು ಮುಂದೆ ನಿನಗೆ ಕೋವಿ ಕೊಡೋಲ್ಲ" ಎನ್ನುತ್ತ ಚೋಮನ ಕೈಯಿಂದ ಕೋವಿಯನ್ನೂ ತೋಟಾಗಳನ್ನೂ ಎಳೆದುಕೊಂಡ. ಚೋಮನಿಗೆ ಚೆಂಗಪ್ಪನ ಮೇಲೆ ಕೋಪ ಬಂದಿತಾದರೂ ಹುಲಿ ಹೊಡೆದ ಖುಷಿ ಒಳಗೇ ಕುಣಿಯುತ್ತಿತ್ತು.

" ಬನ್ನಿ ಗೌಡ್ರೇ, ಹುಲಿ ಹತ್ರ ಹೋಗುವಾ, ಹೆಬ್ಬುಲೀನ ಬೀಳಿಸಿದ ನಿಮ್ಮ ಕೋವಿ ಪೌರುಷ ನೋಡಿ"

" ನನ್ನ ಕೋವಿ ಪೌರುಷ ನಂಗೊತ್ತು. ನೀನು ಸುಳ್ಳು ಹೇಳ್ಕೊಂಡು ಇಲ್ಲಿರ್ಬೇಡ, ನಡಿ" ಚೆಂಗಪ್ಪ ನುಡಿದ.

"ಸುಳ್ಳಲ್ಲ. ಗೌಡ್ರೇ, ನಿಜವಾಗ್ಲೂ...."

"ನನ್ನ ಜುಲ್ಮೆ ಮಾಡ್ಬೇಡ"

ಚೆಂಗಪ್ಪ ಇಷ್ಟು ನಿಷ್ಠುರವಾಗಿ ಮಾತನಾಡುತ್ತಾನೆಂದು ಚೋಮನಿಗೆ ಗೊತ್ತಾದುದು ಇಂದೇ.

"ಗೌಡ್ರೇ....."

".....

"ಗೌಡ್ರೇ.... ನನ್ನ ನಂಬಿ ಗೌಡ್ರೆ" ಚೋಮನಿಗೆ ಅಳುವೇ ಬಂದುಬಿಟ್ಟಿತ್ತು.

ಚೆಂಗಪ್ಪ ಕೆಮ್ಮಿ ಕ್ಯಾಕರಿಸಿ ಉಗಿದ.

"ಹುಂ ಆದ್ರ ಗುರ್ತು ಏನಾರ ತರ್‍ತೀಯಾ"

"ಏನ್ ಗುರ್ತು ಗೌಡ್ರೆ? ಅದ್ರ ಹಲ್ಲಾ?"

"ಯಾಕೆ? ಹಂದೀ ಹಲ್ಲು ತಂದು ಹುಲಿ ಹಲ್ಲೂಂತ ತೋರ್‍ಸಾಕಾ? ನಿನ್ನ ಐಲಾಟ ಬುಡು. ಅದ್ರ ಮೀಸೆ ತಕಬಾ"

---

ಹಸಿದವನಾದರೂ ಎರಡು ಕೈಗಳಿಂದ ಉಣ್ಣಲಾರ.

---

ಚೆಂಗಪ್ಪನ ಆಜ್ಞೆ.

ಇಷ್ಟೆಲ್ಲಾ ತಾನು ಹಿಂದೆ ಮಾಡಿದ್ದ ಮೋಸದಿಂದಲೇ ಆದುದೆಂದು ಚೋಮ ಯೋಚಿಸಿದ. ಅಣ್ಣೆ ಚೆಂಗಪ್ಪನ ಮನ ಹೊಕ್ಕ ವಿಚಾರ ಇವನಿಗೆ ತಿಳಿಯದು.

"ಆಯ್ತು ಗೌಡ್ರೆ, ಆದ್ರ ಮೀಸೆನೇ ತರ್ತೇನೆ" ಎನ್ನುತ್ತ ಕ್ಷಣ ನಿಲ್ಲದೆ ಕಾಡಿನತ್ತ ಹೆಜ್ಜೆ ಹಾಕಿದ. ಚುರುಕಾಗಿ ನಡೆದ ಮತ್ತೆ ಓಡಿದ. ಕುಳ್ಳು ಓಟದೊಡನೆ(ಓಡುವುದು ಮತ್ತೆ ಚುರುಕಾಗಿ ನಡೆಯುವುದು) ನಡುಕಾಡು ತಲುಪಿದ. ಇವನಲ್ಲಿ ಭಯ ಆವರಿಸಿಕೊಂಡಿತ್ತು. ಹಿಂದೊಮ್ಮೆ ಜಿಂಕೆಯೊಂದನ್ನು ಹೊಡೆದು ಹಾಡಿಗೆ ಹೋಗಿ ಬರುವಷ್ಟರಲ್ಲಿ ಅದನ್ನು ಯಾರೋ ಕದ್ದಿದ್ದರು. ಹಾಗೆ ಇಂದು ಚರ್ಮದ ಆಸೆಗೆ ಇದನ್ನು ಯಾರಾದರೂ ಎಳೆದೊಯ್ದುಬಿಟ್ಟರೆ! ಎಂದು ನೊಂದುಕೊಳ್ಳುತ್ತಾ ಚೆಂಗಪ್ಪನನ್ನು ನೆನೆದುಕೊಳ್ಳುತ್ತಾ ಸೀಗೆ ತಡೆಯ ಬಳಿ ತಲುಪಿದ. ಸಧ್ಯ ಹುಲಿ ಅಲ್ಲೇ ಬಿದ್ದಿತ್ತು. 'ಅಪ್ಪಾ ನಾ ಗೆದ್ದೆ' ಎಂದು ನಿಟ್ಟುಸಿರು ಬಿಟ್ಟ. ಕೈಯಲ್ಲಿ ಕೋವಿ ಇಲ್ಲದ್ದಕ್ಕಾಗಿ ಕಸಿವಿಸಿಗೊಂಡ. ಆದರೂ ಯಾಕೋ ಒಂಥರದ ಅಳುಕು. ಜೀವಂತ ಹುಲಿಯನ್ನು ಹೆದರಿಸಿ ಓಡಿಸಬಹುದು. ಆದರೆ ಸತ್ತ ಹುಲಿಯ ಹತ್ತಿರ ಹೋಗುವುದು ಸಾವನ್ನು ಕರೆದಂತೆ. ಅರೆ ಜೀವವಾಗಿರುವ ಪಡ್ಡೆ ಹಂದಿಯೇ ಮೇಲೆ ಬಿದ್ದು ಕಚ್ಚಿ ತಿವಿದು ಸಾಯಿಸಿಬಿಡುವುದುಂಟು. ಅಂತದರಲ್ಲಿ ಹುಲಿ! ಚೋಮ ಬೆವರತೊಡಗಿದ. ಥತ್ ಹೀಗೇಕೆ? ತನ್ನನ್ನೇ ನಂಬದಾದ. ಕಾಲಿಗೆ ನಡೆವ ಶಕ್ತಿ ಕುಂದಿದಂತಾಯಿತು. ಅಂತೂ ನಡೆಯಲೇಬೇಕು, ಒಡೆಯನ ಮನ ಗೆಲ್ಲಲೇಬೇಕು. ಗೆದ್ದು ಮರಳಿ ಕೋವಿಯನ್ನು ಪಡೆಯಬೇಕು. ಒಂದೆರಡು ಹೆಜ್ಜೆ ಹಾಕಿದ. ಮರದ ಮರೆಯಾಗಿ ನಿಂತು ಕೆಮ್ಮಿದ. ಇವನ ಧ್ವನಿ ಕೆಮ್ಮು ಶಕ್ತಿಯನ್ನೂ ಕಳೆದುಕೊಂಡಂತಿತ್ತು. ನಿಜ ಹೇಳಬೇಕೆಂದರೆ ಅವನ ಕೆಮ್ಮು ಅವನಿಗೇ ಕೇಳಿಸಲಿಲ್ಲ. ಮೆಲ್ಲನೆ ಹೆಜ್ಜೆ ಹಾಕಿದ. ಒಣ ಕಡ್ಡಿಗೆ ಮೆಟ್ಟಿದ್ದರಿಂದ ಲಟಕ್ ಅಂತ ಸದ್ದಾಯಿತು. ಚೋಮ ತನ್ನ ಸದ್ದಿಗೇ ಬೆದರಿಬಿಟ್ಟ. ಹುಲಿ ಮಾತ್ರ ಯಾವ ಸದ್ದಿಗೂ ಅಲುಗಾಡಲಿಲ್ಲ. ಅದನ್ನೇ ನೋಡುತ್ತ ನೋಡುತ್ತ ಹತ್ತಿರ ಹೋಗಿಯೇ ಬಿಟ್ಟ. ಅತ್ತ ಸೂರ್ಯ ತನ್ನ ಕೆಂಬಣ್ಣವನ್ನು ಕಳೆದುಕೊಳ್ಳುತ್ತಾ ಕೆಳಕ್ಕಿಳಿಯುತ್ತಿದ್ದ. ಕತ್ತಲಾದರೆ ಇನ್ನೂ ತೊಂದರೆಯೇ ಎನ್ನುತ್ತ ಹುಲಿಯ ಮುಂದೆ ನಿಂತ. ಅಬ್ಬಾ! ಏನಿದರ ತೋಳು? ದಪ್ಪತಲೆ! ಸಣ್ಣ ಕಿವಿ, ನೀಳ ದೇಹ, ಪಟ್ಟೆ ಪಟ್ಟೆ ರೂಪ, ಉದ್ದಬಾಲ - "ಇದರ ಬಾಯಿಗೆ ನಾನೊಂದು ಪಿಳ್ಳೆ? ಎಂದುಕೊಂಡ. ಮೆಲ್ಲ ಬಾಗಿ ಅದರ ಬಾಯಿಯ ಬಳಿ ಕುಳಿತ. "ಯಮರೂಪ...." ಒಳಮನ ನುಡಿಯಿತು. ಅದರ ಅರೆ ತೆರೆದ ಕಣ್ಣು-ಹಾಗೇ ನೋಡಿಕೊಳ್ಳುತ್ತ ಅದರ ಮುಖದ ಹತ್ತಿರ ಬಾಗಿದ. ಇದರ ಎಷ್ಟು ಮೀಸೆಗಳನ್ನು ಕೀಳಲಿ? ಒಂದೇ, ಎರಡೇ ಅಥವಾ ಎಲ್ಲವನ್ನೂ? ಎಲ್ಲಾ ಮೀಸೆಗಳನ್ನೂ ಕೀಳುತ್ತೇನೆ. ಚೆಂಗಪ್ಪ ತನ್ನ ಮೀಸೆಯನ್ನು ಬೋಳಿಸಿಕೊಂಡು ಈ ಮೀಸೆಯನ್ನು ಕಟ್ಟಿಕೊಂಡು ಕುಣೀಲಿ ಎನ್ನುತ್ತ ಅದರ ಮೀಸೆಗೆ ಕೈ ಹಾಕಿದ. ಒಂದು ಮೀಸೆಯನ್ನು ಎಳೆದ. ಆದರೆ ಅದು ಕಿತ್ತುಬರದೆ ಪಸ್ಕಂತ ಜಾರಿಕೊಂಡಿತು. "ಮಾವುಸ ತಿಂದೂ ತಿಂದೂ ಇದ್ರ ಮೀಸೆಗೂ ಯಂಥ ಶಕ್ತಿ? ಇದ್ರ ಕೂದ್ಲಿಗೇ ಯಿಂಥಾ ಶಕ್ತಿ ಇರಲು ತೋಳುಗಳಿಗೆ ಇನ್ನೆಂಥಾ ಶಕ್ತಿ ಇರಬಹುದು" ಎಂದುಕೊಳ್ಳುತ್ತಾ ಮತ್ತೊಮ್ಮೆ ಎಳೆದ. ಊಹುಂ, ಸುತಾರಾಂ ಮೀಸೆ ಕಿತ್ತು ಬರಲೇ ಇಲ್ಲ. ಇದ್ಕೆ ಕಲಿಸ್ತೇನೆಂದುಕೊಂಡು ಬಲಗೈಯ ತೋರು ಬೆರಳಿಗೆ ಮೀಸೆಯನ್ನು ಸುತ್ತಿಕೊಂಡ. ಜೋಡುಗಚ್ಚಿ ಎಳೆದ. ಮೀಸೆ ಎಳೆಯುವುದಕ್ಕೂ ಹುಲಿಗೆ ಪ್ರಜ್ಞೆ ಬರುವುದಕ್ಕೂ ಸಮಯವಾಯ್ತು! ಪಟಾರ್ ಎಂಬ ಪೆಟ್ಟು ಚೋಮನ ಕೆನ್ನೆಯ ಮೇಲೆ ಬಿದ್ದಿತು! ಅವನ ಒಂದು ಕಣ್ಣು ಮತ್ತು ಒಂದು ಕೆನ್ನೆಯ ಮಾಂಸ ಹುಲಿಯ ಹಿಡಿಯೊಳಗೆ ಸೇರಿತು.

ಬಲ್ಲಮಾವಟಿಯ ಪಾಲೆಪರೆಯ ಸುತ್ತಲಿನ ಜನ ಈ ಕುರಿತು ಇಂದೂ ಮಾತನಾಡಿಕೊಳ್ಳುತ್ತಿದ್ದಾರೆ.

* ಜಡ್ಡು - ಸತ್ತ ಪ್ರಾಣಿ

---

# ಜನಾನುರಾಗಿ ಕೊಲ್ಯದ ಸೋಮಯ್ಯ ಇನ್ನಿಲ್ಲ

ಮದೆನಾಡಿನ ಖ್ಯಾತ ಕೃಷಿಕರು, ಗೌಡ ಜನಾಂಗದ ಧೀಮಂತ ವ್ಯಕ್ತಿ, ಹಿರಿಯ ಚಿಂತಕ ಕೊಲ್ಯದ ಸೋಮಯ್ಯನವರು ಫೆಬ್ರವರಿ 13ರಂದು ಅಲ್ಪಕಾಲದ ಅನಾರೋಗ್ಯದ ಬಳಿಕ ನಿಧನ ಹೊಂದಿದರು. ಸೋಮಯ್ಯನವರು ಕೇವಲ ತಮ್ಮ ಮಕ್ಕಳನ್ನಲ್ಲದೆ ಅಪಾರ ಗೌಡ ಜನಾಂಗ ಬಂಧುಗಳನ್ನು ಅಗಲಿದ್ದಾರೆ.

ಗೌಡ ಜನಾಂಗ ಪ್ರೇಮಿಗಳಲ್ಲಿ ಶ್ರೀಯುತರು ಅಗ್ರಗಣ್ಯರು. ಬಾಲಕರಿಂದ ಮುದುಕರಾದಿಯಾಗಿ ಎಲ್ಲರೊಡನೆ ಬಹು ಅನ್ಯೋನ್ಯ ಸಂಪರ್ಕವಿಟ್ಟುಕೊಂಡಿದ್ದ ಇವರು ಗೌಡ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸಲು ಸದಾ ಪ್ರೇರಕ ಶಕ್ತಿಯಾಗಿ ದುಡಿದವರು. ತಮ್ಮ ಇಳಿವಯಸ್ಸಿನಲ್ಲೂ ವಿದ್ಯಾರ್ಥಿಗಳನ್ನು ಬೆನ್ನು ತಟ್ಟಿ ಹುರಿದುಂಬಿಸಿ ಮುನ್ನಡೆಯಲು ಮಾರ್ಗದರ್ಶನ ಮಾಡುತ್ತಿದ್ದ ಇವರ ಗೌರವಾರ್ಥ ಮದೆನಾಡಿನ ಶಾಲಾಕಾಲೇಜುಗಳು ರಜೆ ಘೋಷಿಸಿ ಸಂತಾಪ ಸೂಚಿಸಿದವು.

ಇವರು ಗೌಡ ಜನಾಂಗದ ರಾಜಕೀಯ ಮೇಲ್ಮೆಗಾಗಿಯೂ ಸಾಕಷ್ಟು ಶ್ರಮಿಸಿದವರು. ಸದಾಕಾಲವೂ ದೇಶದ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಚಿಂತನೆ ನಡೆಸುತ್ತಿದ್ದ, ಇವರು ತಮ್ಮದೆ ಧಾಟಿಯಲ್ಲಿ ರಾಜಕೀಯ ವಿಮರ್ಶೆ ನಡೆಸುತ್ತಿದ್ದವರು. ನಮ್ಮ ಜನಾಂಗದ ಯುವರಾಜಕೀಯ ಮುಂದಾಳುಗಳನ್ನು ಆತ್ಮೀಯವಾಗಿ ಆಶೀರ್ವದಿಸುತ್ತಿದ್ದವರು. ಜನರ ಕಷ್ಟ ಸುಖಗಳಲ್ಲಿ ಸದಾಕಾಲವೂ ಭಾಗಿಯಾಗುತ್ತಿದ್ದ ಇವರನ್ನು ಗೌಡ ಸಾಂಸ್ಕೃತಿಕ ಅಕಾಡೆಮಿಯು ಗೌರವಿಸಿತ್ತು. ಇಂದು ನಮ್ಮೆಲ್ಲರನ್ನು ಅಗಲಿದ ಈ ಮಹಾಚೇತನಕ್ಕೆ ಪರಮಾತ್ಮ ಚಿರಶಾಂತಿ ನೀಡಲೆಂಬುದು ಸಂಗಾತಿಯ ಬಯಕೆಯಾಗಿದೆ.

— ಪಟ್ಟಡ ಶಿವಕುಮಾರ್, ಮದೆ.

---

ಪುಸ್ತಕ ಪ್ರೇಮವಿಲ್ಲದವನು ಹಣವಂತನಾದರೂ ದರಿದ್ರನೇ.

# ಹೆರವನಾಡಿನಲ್ಲಿ ಕಾಡುಪಾಲಗಿದ್ದ ಐತಿಹಾಸಿಕ ಮಾದೂರಪ್ಪ ದೇವಾಲಯ ಪತ್ತೆ

## ವಿಘ್ನಗೊಂಡಿರುವ ಶಿವಲಿಂಗ - ಗಣಪತಿ ಮೂರ್ತಿ

ಮಡಿಕೇರಿಗೆ ಸಮೀಪದ ಹೆರವನಾಡು ಗ್ರಾಮದಲ್ಲಿ ಕಾಡು ಪಾಲಾಗಿರುವ ಅಪೂರ್ವ ಶೈಲಿಯ ದೇವಾಲಯವೊಂದರ ಅವಶೇಷಗಳು ಗೋಚರಿಸಿದ್ದು, ಐತಿಹಾಸಿಕ ಹಿನ್ನೆಲೆಯನ್ನು ಸಾರಿ ಹೇಳುವ ಈ ದೇಗುಲದ ಗರ್ಭಗುಡಿಯೊಳಗೆ ವಿಘ್ನಗೊಂಡಿರುವ ಬೃಹದಾಕಾರದ ಶಿವಲಿಂಗ ಹಾಗೂ ಸನಿಹದಲ್ಲೇ ಕಲ್ಲಿನ ಗಣಪತಿ ವಿಗ್ರಹವೊಂದು ಪತ್ತೆಯಾಗಿದೆ.

ಗ್ರಾಮದ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಶಕ್ತಿ ದೇವತೆ ಶ್ರೀ ಭಗವತಿ ಗುಡಿಗೆ ಪೂರ್ವಾಭಿಮುಖವಾಗಿ ಕೆಲವೇ ಹೆಜ್ಜೆಗಳ ಅಂತರದ ಬನದೊಳಗೆ, ಈ ಅಪೂರ್ವಶೈಲಿಯಲ್ಲಿ ನಿರ್ಮಿಸಲ್ಪಟ್ಟಿದ್ದ ಶಿವದೇವಾಲಯದ ಅವಶೇಷಗಳಿರುವ ಗರ್ಭಗುಡಿಯು ಪಶ್ಚಿಮಕ್ಕೆ ಅಭಿಮುಖವಾಗಿ ರೂಪಿತಗೊಂಡಿರುವ ಕುರುಹು ಗೋಚರಿಸುತ್ತದೆ.

ಗ್ರಾಮದ ಭಗವತಿ ದೇವಾಲಯದ ಎದುರು ಪುರಾತನ ಕಾಲದ ಓಣಿಯ ಮೂಲಕ ಕ್ರಮಿಸಿದರೆ ಹಲವು ಶತಮಾನಗಳ ಹಿಂದಿನ ಈ ಶಿವ ದೇವಾಲಯದ ಇತಿಹಾಸವನ್ನು ಸಾರುವ, ಮಂಗಳೂರು ಕಲ್ಲುಗಳಿಂದ ರೂಪಿತಗೊಂಡಿದ್ದ ಗೋಡೆಯ ಅವಶೇಷಗಳು ಬಿದ್ದುಕೊಂಡಿವೆ. ಜೊತೆಗೆ 4.1 ಎಕರೆ ಕಾಡು ಪ್ರದೇಶ ಇಂದಿಗೂ ಇದೆ. ಹೊರಾಂಗಣ ಪ್ರಾಂಗಣವು ವಿಶಾಲವಾಗಿ ಚೌಕಾಕಾರದಿಂದ ನಿರ್ಮಾಣಗೊಂಡಿದ್ದಕ್ಕೆ ಸಾಕ್ಷಿಯಾಗಿ ಕೆಂಪು ಕಲ್ಲುಗಳನ್ನು ಹಾಸಲ್ಪಟ್ಟಿರುವದು ಒಂದೆಡೆಯಾದರೆ, ಒಳಾಂಗಣ ಪ್ರಾಂಗಣದಲ್ಲಿ ಅಷ್ಟದಿಕ್ಕುಗಳಲ್ಲೂ ಬಲಿಪೀಠಗಳು ಎದುರಾಗುತ್ತವೆ.

ಅಲ್ಲಿಂದ ಮುನ್ನಡೆದಾಗ ಕಲ್ಲಿನ ಕೆತ್ತನೆಯಿಂದ ಕೂಡಿದ ಕಟ್ಟಳೆಯು ಇಂದಿಗೂ ಗರ್ಭಗೃಹದ ಹೊರಾಂಗಣದಲ್ಲಿ ಗೋಲಾಕಾರದ ಪ್ರದಕ್ಷಿಣೆ ಪಥಕ್ಕೆ ಹೊಂದಿಕೊಂಡು ಬಲಿಷ್ಠವಾಗಿ ನಿಲ್ಲಿಸಲ್ಪಟ್ಟಿವೆ.

ಅನಂತರದಲ್ಲಿ ಮತ್ತೊಂದು ಗೋಲಾಕೃತಿಯ ಗೋಪುರದಿಂದ ರೂಪಿತಗೊಂಡಿರುವ ಗರ್ಭಗುಡಿಯಲ್ಲಿ ಕಲ್ಲಿನ ಶಿವಲಿಂಗವು ವಿಘ್ನಗೊಂಡು, ಅದರ ಪೀಠ ಸರಿಯಲ್ಪಟ್ಟಿರುವದು ಕಾಣುತ್ತದೆ.

ಈ ದೇವಾಲಯದ ಎಡಭಾಗದಲ್ಲಿ ಹೊರಗೆ ಪೀಠ ಸಹಿತ ಕೆತ್ತಸೆದಿರುವ ಇನ್ನೊಂದು ಶಿವಲಿಂಗ ಕಂಡರೆ, ಬಲಪಾರ್ಶ್ವಕ್ಕೆ ಅಲ್ಪಸ್ವಲ್ಪ ಗೋಡೆಗಳಿರುವ ಮತ್ತೊಂದು ಗುಡಿ ಎದುರಾಗುತ್ತಿದ್ದು. ಈ ಗುಡಿಯೊಳಗೆ ಪೀಠ ಮಾತ್ರವಿದೆಯಾದರೂ ಮೂಲ ವಿಗ್ರಹ ಸ್ಥಾನಪಲ್ಲಟಗೊಂಡಿದೆ.

ಆ ಗುಡಿಗೆ ಹೊಂದಿಕೊಂಡಂತೆ ಹೊರಭಾಗದಲ್ಲಿ ಮಣ್ಣಿನಿಂದ ರೂಪಿತ ವರಾಂಡ, ಶ್ವಾನರೂಪದ ಆಕೃತಿಗಳ ರಾಶಿಯೇ ಬಿದ್ದಿದ್ದು, ಭಕ್ತರಿಂದ ಅವು ಈ ಹಿಂದೆ ದೇವಾಲಯಕ್ಕೆ ಹರಕೆರೂಪದಲ್ಲಿ ಸಲ್ಲಿಸಲ್ಪಟ್ಟಿರುವದಾಗಿದೆ ಎಂದು ಗ್ರಾಮಸ್ಥರು ಅಭಿಪ್ರಾಯ ಪಡುತ್ತಾರೆ.

**ಚಾರಿತ್ರಿಕ ಹಿನ್ನೆಲೆ**

ಅಪೂರ್ವ ಶೈಲಿಯಲ್ಲಿ ಪಶ್ಚಿಮಕ್ಕೆ ಅಭಿಮುಖವಾಗಿ ಅಷ್ಟಭುಜ ಪ್ರಾಂಗಣದಿಂದ ವೃತ್ತಾಕಾರದ ಗೋಪು ಸಹಿತ ನಿಂತಿರುವ ಈ ಅಪೂರ್ವ ಶಿವದೇವಾಲಯವನ್ನು ಹೆರವನಾಡು ಗ್ರಾಮಸ್ಥರು 'ಮಾದೂರಪ್ಪ' ಕ್ಷೇತ್ರಪಾಲ ಎಂದು ಕರೆಯುವದು ಪ್ರತೀತಿ. ಆದರೆ ಈ ದೇವಾಲಯವು ನಿಖರವಾಗಿ ಯಾವ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳುವದು ಕಷ್ಟ ಸಾಧ್ಯ.

ಗ್ರಾಮಸ್ಥರ ಅನಿಸಿಕೆಯಂತೆ ಹಿಂದೆ ಟಿಪ್ಪು ಸುಲ್ತಾನ್ ಕೊಡಗಿನ ಮೇಲೆ ದಂಡೆತ್ತಿ ಬಂದಾಗ ಪ್ರಖ್ಯಾತಿಗೊಂಡಿದ್ದ ಈ ಶಿವ ದೇವಾಲಯದ ಮೂಲ ಲಿಂಗವನ್ನು ಭಗ್ನಗೊಳಿಸಿದ್ದು, ಅಂದಿನಿಂದ ಇಂದಿನವರೆಗೂ ಪೂಜೆಗೊಳ್ಳದೆ ಇಡೀ ದೇವಾಲಯದ ಪರಿಸರ ಕಾಡು ಪಾಲಾಗಿದೆಯಂತೆ.

ಜೊತೆಗೆ ಗ್ರಾಮಸ್ಥರಿಗೆ ಸಕಲ ಅಭೀಷ್ಟಗಳನ್ನು ಕರುಣಿಸುತ್ತಿದ್ದ 'ಮಾದೂರಪ್ಪ'ನ ಭಂಡಾರ ಹಾಗೂ ಆಭರಣಗಳನ್ನು ದಾಳಿ ಸಂದರ್ಭ ಕಾಪಾಡುವ ಸಲುವಾಗಿ ಪಕ್ಕದ ಬಾವಿಯೊಳಗೆ ಎಸೆಯಲ್ಪಟ್ಟಿವೆಯಂತೆ.

ಅಲ್ಲದೆ, ಈ ದೇವಾಲಯದ ಅವಶೇಷಗಳಿರುವ ಪ್ರದೇಶದಲ್ಲಿ ಸರ್ಪಗಳು ಇಂದಿಗೂ ಕಾಣಿಸಿಕೊಳ್ಳುತ್ತಿದ್ದು, ಶಿವಲಿಂಗಕ್ಕೆ ಪೂಜೆಗೊಳ್ಳದೆ ಕಾಡು ಪಾಲಾಗಿರುವ ಪರಿಣಾಮವೆಂಬಂತೆ, ಮಡಿಕೇರಿ ತಾಲೂಕಿನಲ್ಲೇ ಅತೀ ದೊಡ್ಡ ಗ್ರಾಮ ಎನಿಸಿಕೊಂಡಿರುವ ಹೆರವನಾಡಿನ ಜನತೆಯಲ್ಲಿ ಶ್ರೇಯೋಭಿವೃದ್ಧಿ ಕುಂಠಿತಗೊಂಡಿದೆಯಂತೆ.

**ಅರಮನೆಯಿದ್ದ ನಾಡು**

ಕೊಡಗಿನ ರಾಜಮಹಾರಾಜರ ಆಳ್ವಿಕೆಯ ಕಾಲದಲ್ಲಿ ಈ ದೇವಾಲಯ ನಿರ್ಮಾಣಗೊಂಡಿರಬಹುದು ಎಂಬುದಾಗಿ ಅಭಿಪ್ರಾಯಪಡುವ ಗ್ರಾಮಸ್ಥರು, ಹಿಂದೆ ಹೆರವನಾಡಿನಲ್ಲಿ ಅರಮನೆಯಿದ್ದು, ರಾಜನ ಕುಟುಂಬಕ್ಕೆ ಆಪತ್ತು ಬಂದರೆ ರಹಸ್ಯವಾಗಿ ಬಂದು ಗ್ರಾಮದಲ್ಲಿ ತಂಗುತ್ತಿದ್ದುದಾಗಿ ಹೇಳುತ್ತಾರೆ. ಜೊತೆಗೆ ಮಡಿಕೇರಿ ಹೆರವನಾಡು ನಡುವೆ ಸುರಂಗಮಾರ್ಗ ಇದ್ದುದಾಗಿಯೂ ವಿವರಿಸುತ್ತಾರೆ.

ಇತ್ತೀಚಿನ ವರ್ಷಗಳ ತನಕವೂ ರಾಜ ಮನೆತನದ ಅನುಯಾಯಿಗಳ ಕುಟುಂಬವೊಂದು ಹೆರವನಾಡಿನ "ಪನ್ಯ" ದಲ್ಲಿ ನೆಲೆಸಿದ್ದು, ಅನಂತರದಲ್ಲಿ ಆಸ್ತಿಯನ್ನು ಪರಭಾರೆ ಮಾಡಿ ಬೇರೆಡೆಗೆ ತೆರಳಿದ್ದಾರೆ ಎಂದು ಖಾತರಿ ಪಡಿಸುತ್ತಾರೆ.

---

ಪುಸ್ತಕಗಳನ್ನು ನಿಜವಾಗಿ ಪ್ರೀತಿಸುವವರಿಗೆ ಸ್ನೇಹಿತರ ಅಗತ್ಯವಿಲ್ಲ.

ಒಟ್ಟಿನಲ್ಲಿ, ಈ ಐತಿಹಾಸಿಕ ಹಿನ್ನೆಲೆಯ ಶಿವದೇವಾಲಯವನ್ನು ಜೀರ್ಣೋದ್ಧಾರಗೊಳಿಸುವ ಅಭಿಲಾಷೆಯೊಂದಿಗೆ ಗ್ರಾಮಸ್ಥರಾದ ಆರ್. ಎಂ. ಸಿ. ಸದಸ್ಯ ಅರಂಬೂರು ವಸಂತ ಕುಮಾರ್, ಅವಂದೂರು ಗ್ರಾಮ ಪಂಚಾಯಿತಿ ಸದಸ್ಯ ಪಟ್ಟಡ ಉಲ್ಲಾಸ, ಹಿರಿಯರಾದ ಬೊಳ್ಳಿಯಂಡ್ರ ತಿಮ್ಮಯ್ಯ ಮೊದಲಾದವರು ಅಲ್ಲಿನ ಪರಿಸರವನ್ನು ಸಧ್ಯದಲ್ಲೇ ಶ್ರಮದಾನದ ಮೂಲಕ ಸ್ವಚ್ಛಗೊಳಿಸುವದಾಗಿ ಸ್ಥಳಕ್ಕೆ ಭೇಟಿನೀಡಿದ 'ಶಕ್ತಿ' ಯೊಂದಿಗೆ ಹೇಳಿಕೆಯಿತ್ತಿದ್ದಾರೆ.

ಕೃಪೆ : ಶಕ್ತಿ ಪತ್ರಿಕೆ. – ಸಂಗಾತಿ.



ಸ್ಥಾನಪಲ್ಲಟಗೊಂಡ ಶಿವಲಿಂಗ



ದೇವಾಲಯದ ಮುಂಭಾಗ



ಭಗ್ನವಾದ ಶಿವಲಿಂಗ



ಗರ್ಭಗುಡಿಯ ಪಾರ್ಶ್ವನೋಟ



ಶಿವ ದೇವಾಲಯದ ಗರ್ಭಗುಡಿಯ ಹೊರನೋಟ



ಗುಡಿಯೊಳಗೆ ವಿಘ್ನಗೊಂಡಿರುವ ಶಿವಲಿಂಗ

*ಛಾಯಾಗ್ರಫಿ: ಸತ್ಯ ಮತ್ತು ಬೈತಡ್ಕ ದಿನೇಶ್ ಬೆಳ್ಯಪ್ಪ.*

ಇಂಪಾಗಿ ಮಾತನಾಡುವವನ ತಪ್ಪನ್ನು ಯಾರೂ ಗಮನಿಸುವುದಿಲ್ಲ.

# ಮನು ಸ್ಮೃತಿಯ ಪ್ರಕಾರ ವರ್ಣ ಸಂಕರಗಳು ಮತ್ತು ಅವರ ವೃತ್ತಿಗಳು : ಭಾಗ - 2

ಉಚ್ಚ, ನೀಚ. ವರ್ಣ ಸಂಕರಗಳಿಂದ ಒಟ್ಟು ಹದಿನೈದು ಮಿಶ್ರ ಸಂತತಿಯು ಆಗುವುದು. ಆಯಾ ಜಾತಿಗೆ ಯೋಗ್ಯತಾನುಸಾರ ವೃತ್ತಿ ಧರ್ಮವೂ ಇರುವುದು. ದಸ್ಯುವಿಗೆ ಆಯೋಗದವಳಲ್ಲಿ ಹುಟ್ಟಿದ ಸೈರಂಧ್ರರಿಗೆ ಬಲೆಬೀಸಿ ಮೃಗ ಪಕ್ಷಿಗಳನ್ನು ಹಿಡಿದು ಜೀವಿಸುವ ಕೆಲಸ. ವೈದೇಹನಿಗೆ ಆಯೋಗದವಳಲ್ಲಿ ಜನಿಸಿದ ಮೈತ್ರೇಯಕನು ಮಧುರ ಭಾಷಿಯಾಗಿ ರಾಜಮಂದಿರ, ದೇವಮಂದಿರಗಳಲ್ಲಿ ಬೆಳಿಗ್ಗೆ ಗಂಟೆ ಭಾರಿಸುವ ಕೆಲಸ. ನಿಷಾದನಿಗೆ ಆಯೋಗದವಳಲ್ಲಿ ಜನಿಸಿದ ಮಾರ್ಗವನಿಗೆ (ಕೈವರ್ತ) ದೋಣಿ ನಡೆಸುವ ಕೆಲಸ. ನೀಷಾದನಿಗೆ ವೈದೇಹಿಯಲ್ಲಿ ಜನಿಸಿದ ಕಾರಾವರನಿಗೆ ಚರ್ಮ ಹೊಲಿಯುವ ವೃತ್ತಿ. ಆಂಧ್ರ ಮೇದರು ಊರಹೊರಗೆ ಬದುಕುವರು. ಚಂಡಾಲನಿಗೆ ವೈದೇಹಿಯಲ್ಲಿ ಜನಿಸಿದವನನ್ನು ಪಾಂಡು ಸೋಪಾಕ ಎನ್ನುತ್ತಾರೆ. ಇವರಿಗೆ ಬೆತ್ತ ಹೆಣೆಯುವ ಕೆಲಸ. ನಿಷಾದನಿಗೆ ವೈದೇಹಿಯಲ್ಲಿ ಜನಿಸಿದ ಆ ಹಿಂಡಕನಿಗೆ ಜೈಲಿನ ಕೆಲಸ. ಪುಕ್ಕಸಿಗೆ ಚಂಡಾಲನಿಂದ ಸೋಪಾಕನು, ಅವನಿಗೆ ಮರಣದಂಡನೆಯನ್ನು ನ್ಯಾಯಾಧೀಶರ ಆದೇಶದಂತೆ ನಿರ್ವಹಿಸುವ ವೃತ್ತಿ. ನಿಷಾದೀ ಚಂಡಾಲ ಜಾತನು ರುದ್ರಭೂಮಿಯಲ್ಲಿ ಜೀವಿಸುವನು. ಅಂತ್ಯಾದಸಾಯಿಯೆಂದು ಅವನ ಹೆಸರು. ಸೂತರಿಗೆ ಕುದುರೆಗಳ, ಅಂಬಷ್ಠರಿಗೆ ಚಿಕಿತ್ಸೆ, ವೈದೇಹರಿಗೆ ಅಂತಃ ಪುರದ, ಮಾಗಧರಿಗೆ ವಾಣಿಜ್ಯ ವೃತ್ತಿಯು, ನಿಷಾದರಿಗೆ ಮೀನು, ಆಯೋಗದವರಿಗೆ ಕೆತ್ತನೆ, ಮೇದ, ಆಂಧ್ರ, ಚುಂಚು, ಮದ್ಗು ಇವರಿಗೆ ಕಾಡು ಪ್ರಾಣಿಗಳ ಬೇಟೆ ವೃತ್ತಿಯು, ಕ್ಷತ್ರ, ಉಗ್ರ, ಪುಕ್ಕಸ, ಇವರಿಗೆ ಬಿಲದಲ್ಲಿರುವ ಉಡು ಮೊದಲಾದ ಪ್ರಾಣಿಗಳನ್ನು ಹಿಡಿದು ತಿಂದು ಬದುಕುವುದು. ದಿಗ್ವಣರಿಗೆ ಚರ್ಮದ ಕೆಲಸ. ವೇಣರಿಗೆ ವಾದ್ಯಬಾರಿಸುವ ಕೆಲಸ. ಊರ ಹೊರಗೆ ಚಂಡಾಲಾದಿಗಳ ವಾಸಸ್ಥಾನ. ಒಳ್ಳೆ ಪಾತ್ರೆಗಳನ್ನು ಅವರು ಉಪಯೋಗಿಸಬಾರದು. ನಾಯಿ ಕತ್ತೆ ಅವರ ಸೊತ್ತು. ಹೆಣದ ಬಟ್ಟೆ ಅವರ ಉಡುಗೆ. ಒಡೆದ ಓಡಿನಲ್ಲಿ ಊಟ, ಕಬ್ಬಿಣದ ಬಳೆ ಉಂಗುರ ತೊಡುಗೆ. ಸದಾ ಸಂಚಾರ. ಧರ್ಮ ಕಾರ್ಯ ನಡೆಯುತ್ತಿರುವಾಗ ಇವರೊಂದಿಗೆ ವ್ಯವಹಾರವಿಲ್ಲ. ಕೂಲಿಯುವರ ಮೂಲಕ ಒಡೆದ ಪಾತ್ರೆಯಲ್ಲಿ ಆಹಾರ ಕೊಡಬಹುದು. ರಾತ್ರಿ ಅವರು ಗ್ರಾಮ ನಗರಗಳಲ್ಲಿ ಸಂಚರಿಸಬಾರದು. ರಾಜಾಜ್ಞೆಯಂತೆ ಗುರುತು ಮಾಡಿದರೆ ಅವರು ಹಗಲು ತಿರುಗಾಡಬಹುದು. ನಿರ್ಗತಿಕ ಶವವನ್ನು ಸಂಸ್ಕರಿಸಬಹುದು. ಗಲ್ಲಿ ಹಾಕುವುದು. ಅವರ ಚಾಪೆ, ಬಟ್ಟೆ ಬರೆ ಉಪಯೋಗಿಸುವುದು ಇವರ ಜೀವನ. ಕ್ರೂರತ್ವ ಪರುಷವಚನ ಅಸಂಸ್ಕಾರ ಇವುಗಳು ನೀಚ ಜನ್ಮದ ಲಕ್ಷಣಗಳು. ಮನುಷ್ಯನು ತಂದೆಯ ಅಥವಾ ತಾಯ ಗುಣವನ್ನು ತೋರಿಸುತ್ತಾನೆ. ಮಹಾ ಕುಲದವನು ಸಂಕರ ಜಾತನಾದರೆ ದುರ್ಲಕ್ಷಣಗಳನ್ನು ತೋರಿಸುವನು. ಕುಸಂತತಿಯು ಇತರರೊಡನೆ ದೇಶವನ್ನೇ ಕೆಡಿಸುತ್ತದೆ. ಸ್ತ್ರೀ, ಬಾಲ, ಗೋ, ಬ್ರಾಹ್ಮಣ ಇವರ ರಕ್ಷಣೆಗೆ ಕುಸಂತತಿಯು ಆತ್ಮತ್ಯಾಗ ಮಾಡಿದರೆ ಅವರಿಗೆ ಸದ್ಗತಿಯು ಉಂಟಾಗುವುದು. ಅಹಿಂಸೆ, ಸತ್ಯ, ಶುಚಿ, ಇಂದ್ರಿಯ ಜಯ ಅಚೌರ್ಯ ಇವು ಸಕಲರಿಗೆ ಮುಖ್ಯ ಧರ್ಮಗಳು

ಬ್ರಾಹ್ಮಣನಿಗೆ ಕಲಿಯುವುದು, ಕಲಿಸುವುದು, ಹೋಮ ಮಾಡುವುದು, ಮಾಡಿಸುವುದು, ಕೊಡುವುದು, ತೆಗೆದುಕೊಳ್ಳುವುದು ಹೀಗೆ ಆರು ಕರ್ತವ್ಯಗಳು, ಆರರಲ್ಲಿ ಮೂರು ಜೀವನೋಪಾಯ, ಕೆಟ್ಟವರಿಂದ ಸ್ವೀಕರಿಸಬಾರದು. ಕ್ಷತ್ರೀಯರಿಗೆ ಯಜನ ಅಧ್ಯಯನ ಶಸ್ತ್ರಾಸ್ತ್ರ ಮಾತ್ರ. ಬ್ರಾಹ್ಮಣನಿಗೆ ವಿಧಿತ ಸ್ವಕರ್ಮದಿಂದ ಜೀವನವಾಗದಿದ್ದರೆ ಹತ್ತಿರದ ಕ್ಷಾತ್ರದ ಅಥವಾ ವೈಶ್ಯ ವೃತ್ತಿಯನ್ನೂ ಮಾಡಬಹುದು. ಆದರೆ ಶೂದ್ರ ವೃತ್ತಿಯನ್ನು ಮಾಡಬಾರದು. ಸಾತ್ವಿಕರಾದ ಇವರು ನೇಗಿಲಿನಿಂದ ಉತ್ತಾಗ ಭೂಮಿಗೆ ಜಂತುಗಳಿಗೆ ಹಿಂಸೆಯಾಗುವುದು

